ವಿಜಯಪುರ | ಸಂಪುಟ 02 | ಸಂಚಿಕೆ 56 | ಪುಟ 4 | ₹ 3.00

https://udayarashminews.com

udayarashmi 7026028778

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com

RNI NO: KARKAN/2023/86203

ಶುಕ್ರವಾರ, ಏಪ್ರಿಲ್ 19, 2024

“ಚಿಕ್ಕಬಳ್ಳಾಪುರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ.ಕೆ ಸುಧಾಕರ್ ಆರೋಗ್ಯ ಸಚಿವರಾಗಿದ್ದಾಗ ಭ್ರಷ್ಟಾಚಾರ ಎಸಗಿದ್ದಾರೆ. ಕೋವಿಡ್ ಭ್ರಷ್ಟಾಚಾರದ ತನಿಖೆಗೆ ಆಯೋಗ ರಚಿಸಿದ್ದು, ಎಲ್ಲ ದಾಖಲೆಗಳು ಅವರ ವಿರುದ್ಧವಿದೆ. ಅವರು ಜೈಲಿಗೆ ಹೋಗೋದು ಖಚಿತ.”

ಉದಯರಶ್ಮಿ ದಿನಪತ್ರಿಕೆ



– ಸಿದ್ದರಾಮಯ್ಯ
ಮುಖ್ಯಮಂತ್ರಿಗಳು

## ಚುನಾವಣೆಯಲ್ಲಿ ಪ್ರತಿಯೊಂದು ಓಟು ನಿರ್ಣಾಯಕ ಎಂದ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್

# ಲೋಕಸಭೆ ಚುನಾವಣೆಗೆ ನಾಳೆ ಮೊದಲ ಹಂತದ ಮತದಾನ

**ನವದೆಹಲಿ:** ಲೋಕಸಭೆ ಚುನಾವಣೆಯ ಮೊದಲ ಹಂತದ ಮತದಾನಕ್ಕೆ ಕ್ಷಣಗಣನೆ ಆರಂಭವಾಗಿದ್ದು, ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಗುರುವಾರ ಪ್ರತಿಯೊಂದು ಮತದ ಮಹತ್ವವನ್ನು ಜನರಿಗೆ ನೆನಪಿಸಿದ್ದಾರೆ. ಚುನಾವಣೆಯಲ್ಲಿ ಪ್ರತಿಯೊಂದು ಓಟು ನಿರ್ಣಾಯಕ ಎಂದು ಅವರು ಹೇಳಿದ್ದಾರೆ.

ಚುನಾವಣೆಗಳು ಭಾರತದ ಪ್ರಜಾಪ್ರಭುತ್ವದ ಅತ್ಯಂತ ಸುಂದರವಾದ ಅಭಿವ್ಯಕ್ತಿಯಾಗಿದೆ. “ಮತದಾನಕ್ಕೆ ಸಮಾನವಾದುದು ಯಾವುದೂ ಇಲ್ಲ” ಎಂದು ಅವರು ವೀಡಿಯೊ ಸಂದೇಶದಲ್ಲಿ ಹೇಳಿದ್ದಾರೆ. ಬಿರು ಬಿಸಿಲಿನ ಹಿನ್ನೆಲೆಯಲ್ಲಿ ಜನರು ಎಲ್ಲಾ ಮುನ್ನೆಚ್ಚರಿಕೆ ತೆಗೆದುಕೊಳ್ಳಬೇಕು. ಭಾರತೀಯ ಮತದಾರರ ಚೈತನ್ಯವು ಬೇಸಿಗೆಯ ಬಿಸಿಯನ್ನು ಸೋಲಿಸುತ್ತದೆ ಎಂದು ನನಗೆ ತಿಳಿದಿದೆ ಎಂದಿದ್ದಾರೆ.




ನಮ್ಮ ಪ್ರಜಾಪ್ರಭುತ್ವದಲ್ಲಿ, ಚುನಾವಣೆಗಳು ನಿಮಗೆ ಸೇರಿದ್ದು, ಆಯ್ಕೆಯು ನಿಮಗೆ ಸೇರಿದೆ. ನೀವು ಸರ್ಕಾರವನ್ನು ನಿರ್ಧರಿಸುತ್ತೀರಿ. ನಿಮ್ಮ ಸಲುವಾಗಿ, ನಿಮ್ಮ ಕುಟುಂಬ ಮತ್ತು ಮಕ್ಕಳಿಗಾಗಿ, ನಿಮ್ಮ ಗ್ರಾಮ ಅಥವಾ ಪಟ್ಟಣಕ್ಕಾಗಿ ಮತ್ತು ಸಹಜವಾಗಿ, ದೇಶಕ್ಕಾಗಿ ಎಂದಿರುವ ಅವರು,”ಚುನಾವಣಾ ಭಾಗವಹಿಸುವಿಕೆಯಲ್ಲಿ ಕ್ರಾಂತಿ ನಡೆಸಲು ಯುವ ಜನಾಂಗಕ್ಕೆ ಕರೆ ನೀಡುತ್ತೇನೆ. ಪ್ರತಿಯೊಂದು ಮತವು ಮಹತ್ವದ್ದಾಗಿದೆ ಎಂದು ಅವರು ಹೇಳಿದ್ದಾರೆ.


ಶುಕ್ರವಾರದಂದು 21 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಹರಡಿಕೊಂಡಿರುವ 102 ಸ್ಥಾನಗಳಿಗೆ ಮೊದಲ ಹಂತದ ಲೋಕಸಭಾ ಚುನಾವಣೆ ನಡೆಯಲಿದೆ. ಅರುಣಾಚಲ ಪ್ರದೇಶ (60 ಸ್ಥಾನಗಳು) ಮತ್ತು ಸಿಕ್ಕಿಂ (32 ಸ್ಥಾನಗಳು) ವಿಧಾನಸಭೆ ಚುನಾವಣೆಗಳು ಸಹ ಏಕಕಾಲದಲ್ಲಿ ನಡೆಯಲಿವೆ.

ಈ ಹಂತದಲ್ಲಿ 16.63 ಕೋಟಿಗೂ ಹೆಚ್ಚು ಮತದಾರರು ತಮ್ಮ ಹಕ್ಕು ಚಲಾಯಿಸಲು ಅರ್ಹರಾಗಿದ್ದಾರೆ. ಮತದಾರರಲ್ಲಿ 8.4 ಕೋಟಿ ಪುರುಷರು, 8.23 ಕೋಟಿ ಮಹಿಳೆಯರು ಮತ್ತು 11,371 ತೃತೀಯಲಿಂಗಿಗಳು ಸೇರಿದ್ದಾರೆ. 35.67 ಲಕ್ಷ ಮೊದಲ ಬಾರಿಗೆ ಮತದಾರರಿದ್ದಾರೆ, ಜೊತೆಗೆ 20–29 ವರ್ಷ ವಯಸ್ಸಿನ 3.51 ಕೋಟಿ ಯುವ ಮತದಾರರಿದ್ದಾರೆ.

### ರಾಜ ನುಡಿ

ಒಳ್ಳೆಯ ಆರೋಗ್ಯಕ್ಕೆ ಕಹಿ ಮಾತ್ರೆಗಳನ್ನು ನುಂಗುತ್ತೇವೆಯೇ ಹೊರತು ನಾಲಿಗೆಯ ಮೇಲಿಟ್ಟು ಚಪ್ಪರಿಸುವುದಿಲ್ಲ. ಹಾಗೆಯೇ ಒಳ್ಳೆಯ ಜೀವನಕ್ಕೆ ಕಹಿ ಮಾತುಗಳನ್ನು, ಕಹಿ ನೆನಪುಗಳನ್ನು, ಕಹಿ ಘಟನೆಗಳನ್ನು, ಕಹಿ ಕಷ್ಟಗಳನ್ನು ಎದೆಯಲ್ಲಿ ಇರಿಸಿಕೊಳ್ಳದೆ ಒಳಗೆ ನುಂಗಿಬಿಡಬೇಕು.

–ಡಾ. ರಾಜಶೇಖರ ನಾಗೂರ



### ವಚನ ಚಿಂತನ 360

*ಅರಿಯದ ಶಬ್ದವ ಕುರುಹಿಂಗೆ ತಂದ ಬಸವಯ್ಯನು.*
*ಆ ಕುರುಹನೆರಡಮಾಡಿದ ಬಸವಯ್ಯನು.*
*ಅವೆರಡ ಒಂದರಲ್ಲಿ ವೇಧಿಸಿ ಸಂಗಯ್ಯನ*
*ಲ್ಲಿಸ್ವಯಲಿಂಗಿಯಾದನಯ್ಯ ಬಸವಯ್ಯನು.*

ನೀಲಮ್ಮನವರು ಈ ವಚನದ ಮೂಲಕ ಇಷ್ಟಲಿಂಗದ ಜನಕ ಬಸವಣ್ಣನವರು ಎಂಬುದನ್ನು ಸಾಕ್ಷೀಕರಿಸಿದ್ದಾರೆ. 12ನೇ ಶತಮಾನಕ್ಕಿಂತಲೂ ಪೂರ್ವದಲ್ಲಿ ಇದ್ದುದು ಕೇವಲ ಸ್ಥಾವರಲಿಂಗ. ಇಷ್ಟಲಿಂಗದ ಸ್ವರೂಪವನ್ನು ಮೊದಲಬಾರಿಗೆ ಬಸವಣ್ಣನವರು ಜಾರಿಗೆ ತಂದು ಕರಸ್ಥಲಕ್ಕೆ ತಂದುಕೊಟ್ಟ ಬಗ್ಗೆ ಬಸವಣ್ಣನವರು ವಿಚಾರಪತ್ನಿ ನೀಲಮ್ಮನವರು ವಚನದ ಪ್ರಾರಂಭದ ಸಾಲಿನಲ್ಲಿ “ಅರಿಯದ ಶಬ್ದವ ಕುರುಹಿಗೆ ತಂದ ಬಸವಯ್ಯನು.” ಎನ್ನುವ ಮೂಲಕ ಜಗದಗಲ ಮುಗಿಲಗಲ ಮಿಗೆಯಗಲ ಅಗಮ್ಯ ಅಗೋಚರ ಅಪ್ರತಿಮ ಲಿಂಗವನ್ನು ಸಾಮಾನ್ಯ ಜನರು ಶಬ್ದಗಳು ಮೂಲಕ ಅರಿಯದಾದಾಗ ಇಷ್ಟಲಿಂಗದ ಕುರುಹಿನ ಮೂಲಕ ಲಿಂಗವನ್ನು ಅರ್ಥೈಸಿಕೊಳ್ಳಲು ಸಹಾಯ ಮಾಡಿದರು ಎಂದಿದ್ದಾರೆ. “ಆ ಕುರುಹನೆರಡಮಾಡಿದ ಬಸವಯ್ಯನು.”– ಎಂದರೆ ಅಂಗವು ಮಹಾಲಿಂಗದ ಅಂಶವೇ ಆಗಿದೆ. ಹಾಗೆಯೇ ಇಷ್ಟಲಿಂಗವು ಮಹಾಲಿಂಗದ ಚುಳುಕು, ಅವೆರಡೂ ಭಿನ್ನವಾಗಿಗೋಚರಿಸಿದರು, ಲಿಂಗಾಂಗಯೋಗದ ಮೂಲಕ ಒಂದಾಗಿಸಿ ಸ್ವಯಂ ಲಿಂಗಿಯಾದರು ಬಸವಣ್ಣನವರು ಎಂದಿದ್ದಾರೆ. (ಅವೆರಡ ಒಂದರಲ್ಲಿ ವೇಧಿಸಿ ಸಂಗಯ್ಯನಲ್ಲಿ ಸ್ವಯ ಲಿಂಗಿಯಾದನಯ್ಯ ಬಸವಯ್ಯನು.) ಡೋಹರ ಕಕ್ಕಯ್ಯನವರು ಹೇಳುವಂತೆ ಎನ್ನ ಕಷ್ಟ ಕುಲದಲ್ಲಿ ಹುಟ್ಟಿದೆನೆಂಬ ಕರ್ಮವ ಕಳೆದು ಮುಟ್ಟಿ ಪಾವನವ ಮಾಡಿ ಕೊಟ್ಟನಯ್ಯಾ ಎನ್ನ ಕರಸ್ಥಲಕ್ಕೆ ಲಿಂಗವ! ಆ ಲಿಂಗ ಬಂದು ಸೋಂಕಲೊಡನೆ ಎನ್ನ ಸರ್ವಾಂಗದ ಅವಲೋಹವಳಿಯಿತ್ತಯ್ಯಾ! ಎನ್ನ ತನುವಿನಲ್ಲಿ ಗುರುವ ನೆಲೆಗೊಳಿಸಿದ, ಎನ್ನ ಮನದಲ್ಲಿ ಜಂಗಮವ ನೆಲೆಗೊಳಿಸಿದ, ಎನ್ನ ಅರುಹಿನಲ್ಲಿ ಪ್ರಸಾದವ ನೆಲೆಗೊಳಿಸಿದ! ಇಂತೀ ತ್ರಿವಿಧ ಸ್ಥಾನವ ಶುದ್ಧವ ಮಾಡಿ ಚತುರ್ವಿಧ ಸಾರಾಯ ಸ್ಥಲವ ಸಂಬಂಧವ ಮಾಡಿದ ಸಂಗನ ಬಸವಣ್ಣನ ಕರುಣದಿಂದ ಪ್ರಭುದೇವರ ಶ್ರೀಪಾದವ ಕಂಡು ಬದುಕಿದೆನು ಕಾಣಾ! ಅಭಿನವ ಮಲ್ಲಿಕಾರ್ಜುನಾ. ಎನ್ನುವಲ್ಲಿ ಇಷ್ಟಲಿಂಗವನ್ನು ಕೊಟ್ಟವರು ಬಸವಣ್ಣನವರು ಎನ್ನುವುದಕ್ಕೆ ಪುಷ್ಟಿದೊರೆಯುತ್ತಿದೆ.

-ರುದ್ರೇಶ ಕಿತ್ತೂರ, ಮುದ್ದೇಬಿಹಾಳ

## ಕನಮಡಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಸಭೆ ಉದ್ಘಾಟಿಸಿದ ಸಚಿವ ಎಂ. ಬಿ. ಪಾಟೀಲ ಅಭಿಮತ

# ಮೋದಿ ದೂರದೃಷ್ಠಿಯ ಕೊರತೆಯಿಂದ ರೂಪಾಯಿ ಮೌಲ್ಯ ಕುಸಿತ

**ಉದಯರಶ್ಮಿ ನ್ಯೂಸ್**

ವಿಜಯಪುರ: ಮೋದಿ ನೇತೃತ್ವದ ಕೇಂದ್ರ ಸರಕಾರದ ದೂರದೃಷ್ಠಿಯ ಕೊರತೆಯಿಂದಾಗಿ ಇಂದು ದೇಶದಲ್ಲಿ ರೂಪಾಯಿ ಮೌಲ್ಯ ಕುಸಿದು ಬೆಲೆ ಏರಿಕೆಯಿಂದ ಜನರು ತತ್ತರಿಸುವಂತಾಗಿದೆ ಎಂದು ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವ ಎಂ. ಬಿ. ಪಾಟೀಲ ಹೇಳಿದ್ದಾರೆ.

ಬುಧವಾರ ಮುಸ್ಸಂಜೆ ಲೋಕಸಭೆ ಚುನಾವಣೆ ಹಿನ್ನೆಲೆ ತಿಕೋಟಾ ತಾಲೂಕಿನ ಕನಮಡಿಯಲ್ಲಿ ಜಿ. ಪಂ. ವ್ಯಾಪ್ತಿಯ ಕಾಂಗ್ರೆಸ್ ಕಾರ್ಯಕರ್ತರ ಸಭೆ ಉದ್ಘಾಟಿಸಿ ಅವರು ಮಾತನಾಡಿದರು.

ಕಾಂಗ್ರೆಸ್ ದೇಶಕ್ಕೆ ಏನು ಮಾಡಿದೆ ಎಂದು ಬಿಜೆಪಿಯವರು ಪ್ರಶ್ನಿಸುತ್ತಾರೆ. ಆದರೆ, ಕಾಂಗ್ರೆಸ್ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟು ಸ್ವಾತಂತ್ರ್ಯ ನಂತರ ದೇಶವನ್ನು ಕಟ್ಟುವ ಕೆಲಸ ಮಾಡಿದೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಕ್ಷದ ಲಕ್ಷಾಂತರ ಹಿರಿಯರು ತ್ಯಾಗ ಮತ್ತು ಬಲಿದಾನ ಮಾಡಿ ಹುತಾತ್ಮರಾಗಿದ್ದಾರೆ. ಆದರೆ, ಇದೇ ಬಿಜೆಪಿಯವರು ಬ್ರಿಟೀಷರಿಗೆ ಬೆಂಬಲವಾಗಿ ನಿಂತಿದ್ದರು. ಸ್ವಾತಂತ್ರ್ಯದ ನಂತರ ದೇಶದ ಆಹಾರದ ಕೊರತೆ ನೀಗಿಸಲು ಜವಾಹರಲಾಲ ನೆಹರು ಮತ್ತು ಲಾಲ ಬಹಾದ್ದೂರ ಶಾಸ್ತ್ರಿ ಅವರು ಹಸಿರು ಹಾಗೂ ಕ್ಷೀರ ಕ್ರಾಂತಿ ಮಾಡಿದರು. ನಾನಾ ಸಾರ್ವಜನಿಕ ಉದ್ದಿಮೆಗಳನ್ನು ಸ್ಥಾಪಿಸಿ ಉದ್ಯೋಗ ಸೃಷ್ಠಿ ಮತ್ತು ಆರ್ಥಿಕ ಅಭಿವೃದ್ಧಿಗೆ ಉತ್ತೇಜನ ನೀಡಿದರು. ಇಂದಿರಾ ಮತ್ತು ರಾಜೀವ ಗಾಂಧಿ ಸೂರು, ಸಂಪರ್ಕ ಕ್ರಾಂತಿ ಮಾಡಿದರು. ಆದರೆ, ಈಗ ನರೇಂದ್ರ ಮೋದಿ ಮತ್ತು ಅಮೀತ ಶಾ ಅವುಗಳನ್ನು ಖಾಸಗೀಕರಣ ಮಾಡುವ ಮೂಲಕ ಮಾರಾಟ ಮಾಡುತ್ತಿದ್ದಾರೆ. ಅಂಬಾನಿ ಮತ್ತು ಅದಾನಿ ಅವುಗಳನ್ನು ಖರೀದಿಸುತ್ತಿದ್ದಾರೆ. ಈ ನಾಲ್ಕು ಜನರ ಸಲುವಾಗಿ ದೇಶ ನಡೆಸುವಂತಾಗಿದೆ ಎಂಬ ಚರ್ಚೆ ವ್ಯಾಪಕವಾಗಿದೆ ಎಂದು ಹೇಳಿದರು.

ದರಿದೇವರ ಆಶೀರ್ವಾದದಿಂದ 684 ಮೀಟರ್ ಎತ್ತರದಲ್ಲಿರುವ ಕನಮಡಿ ಗ್ರಾಮಕ್ಕೆ ನೀರು ಕೊಟ್ಟಿದ್ದೇನೆ. ಬಾಕಿ ಇರುವ ಕಾಮಗಾರಿಗಳ ಮೂಲಕ ನೀರು ಧರಿದೇವರ ಪಾದಸ್ಪರ್ಷಿಸಿ ಮುಂದೆ ಸಾಗುವಂತೆ ಮಾಡುತ್ತೇನೆ. ನೀವು ಅನುಭವಿಸಿದ ಸಂಕಷ್ಟ ನಿಮ್ಮ ಮುಂದಿನ ಪೀಳಿಗೆ ಎದುರಿಸಬಾರದು ಎಂಬ ಮುಂದಾಲೋಚನೆಯಿಂದ ಶಾಶ್ವತ ಯೋಜನೆ ರೂಪಿಸಲಿದ್ದೇನೆ. ಜಲಕ್ರಾಂತಿಯ ನಂತರ ಜಿಲ್ಲೆಯಲ್ಲಿ ಈಗ ಉದ್ಯೋಗ ಕ್ರಾಂತಿ, ಕ್ಷೀರಕ್ರಾಂತಿ ಮಾಡುವ ಗುರಿ ಇದೆ. ಕಾನ್ವೆಂಟ್ ಮಾದರಿಯಲ್ಲಿ ಸರಕಾರಿ ಶಾಲೆಗಳನ್ನು ಅಭಿವೃದ್ಧಿ ಮಾಡುತ್ತೇವೆ. ಹೀಗಾಗಿ ಕಾಂಗ್ರೆಸ್ ಅಭ್ಯರ್ಥಿ ಪ್ರೊ. ರಾಜು ಆಲಗೂರ ಅವರಿಗೆ ಮತ ಹಾಕಿ ನನ್ನ ಕೈ ಬಲಪಡಿಸಬೇಕು ಎಂದು ಅವರು ಮನವಿ ಮಾಡಿದರು.



ವಿಧಾನ ಪರಿಷತ್ ಶಾಸಕ ಪ್ರಕಾಶ ರಾಠೋಡ ಮಾತನಾಡಿ, ಬಿಜೆಪಿ ಭಾವನಾತ್ಮಕ ಹೇಳಿಕೆಗಳ ನೀಡುತ್ತ ಕೋಮು ಭಾವನೆ ಕೆರಳಿಸಿ, ದೇಶದಲ್ಲಿ ಸಾಮರಸ್ಯ ಹಾಳು ಮಾಡುತ್ತಿದೆ. ಸರ್ವಾಧಿಕಾರಿಯ ಧೋರಣೆ ಮೂಲಕ ಪ್ರತಿಪಕ್ಷದ ನಾಯಕರ ವಿರುದ್ಧ ಇಡಿ, ಐಟಿ, ಸಿಬಿಐ ಮೂಲಕ ಕಿರುಕುಳ ನೀಡುತ್ತಿದೆ. ಈ ಸಂಸ್ಥೆಗಳ ಮೂಲಕ 25 ಜನ ನಾಯಕರ ಪ್ರಚಾರಕ್ಕೆ ಈ ಮೂಲಕ ಅಡ್ಡಿಪಡಿಸಿದೆ. ಈ ದೇಶದ ಸಂವಿಧಾನ ಬದಲಾವಣೆ ಮಾಡಿ ಚುನಾವಣೆ ನಡೆಯದಂತೆ, ಪ್ರಜಾಪ್ರಭುತ್ವ ತೆಗೆದು ಹಾಕಲು ಬಿಜೆಪಿ ಹುನ್ನಾರ ನಡೆಸುತ್ತಿದೆ. ಈ ಬಗ್ಗೆ ಮತದಾರರು ಎಚ್ಚರಿಕೆ ವಹಿಸಬೇಕು ಎಂದರು.

ಕಾಂಗ್ರೆಸ್ ಅಭ್ಯರ್ಥಿ ಪ್ರೊ. ರಾಜು ಆಲಗೂರ ಮಾತನಾಡಿ ಮತ ಯಾಚಿಸಿದರು.

ಜಿ. ಪಂ. ಮಾಜಿ ಅಧ್ಯಕ್ಷ ಸೋಮನಾಥ ಬಾಗಲಕೋಟ ಮಾತನಾಡಿ, ಆಲಗೂರ ಅವರನ್ನು ಗೆಲ್ಲಿಸಿ ಕೇಂದ್ರದಲ್ಲಿ ವಿಜಯಪುರ ಜಿಲ್ಲೆಯ ಧ್ವನಿ ಪ್ರತಿಧ್ವನಿಸಲು ಕೈಜೋಡಿಸೋಣ ಎಂದು ಹೇಳಿದರು.

ಈ ಸಂದರ್ಭದಲ್ಲಿ ತಿಕೋಟಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿದ್ದು ಗೌಡನವರ, ಮುಖಂಡರಾದ ಯಾಕೂಬ್ ಜತ್ತಿ, ವಿದ್ಯಾರಾಣಿ ತುಂಗಳ, ಗೀತಾಂಜಲಿ ಪಾಟೀಲ, ಸಿದ್ದನಗೌಡ ರುದ್ರಗೌಡರ, ಎ. ಎಂ. ಬಿರಾದಾರ, ಗುರು ಮಾಳಿ, ಶಾಂತಾ ಬಿರಾದಾರ, ಮಾನಿಂಗ ಜವನರ ಮುಂತಾದವರು ಉಪಸ್ಥಿತರಿದ್ದರು.

## ದೇವರಹಿಪ್ಪರಗಿ: ಬಿ.ಬಿ.ಇಂಗಳಗಿ ಗ್ರಾಮಸ್ಥರಿಂದ ತಹಶೀಲ್ದಾರ ಕಚೇರಿಗೆ ಮುತ್ತಿಗೆ

# ಕುಡಿವ ನೀರಿಗೆ ಆಗ್ರಹಿಸಿ ಖಾಲಿ ಕೊಡಗಳೊಂದಿಗೆ ಪ್ರತಿಭಟನೆ

**ಉದಯರಶ್ಮಿ ನ್ಯೂಸ್**

ದೇವರಹಿಪ್ಪರಗಿ: ಗ್ರಾಮದಲ್ಲಿ ಸಮರ್ಪಕ ಕುಡಿಯುವ ನೀರು ಪೂರೈಸಲು ಆಗ್ರಹಿಸಿ ಮಹಿಳೆಯರು ಸೇರಿದಂತೆ ಗ್ರಾಮಸ್ಥರು ಖಾಲಿ ಕೊಡಗಳೊಂದಿಗೆ ಆಗಮಿಸಿ ತಹಶೀಲ್ದಾರ ಕಚೇರಿ ಮುಂದೆ ಧರಣಿ ಕುಳಿತು ಪ್ರತಿಭಟಿಸಿದರು.

ತಾಲ್ಲೂಕಿನ ಕೊಂಡಗೂಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಿ.ಬಿ.ಇಂಗಳಗಿ ಗ್ರಾಮಸ್ಥರು ಬುಧವಾರ ತಹಶೀಲ್ದಾರ ಕಚೇರಿಗೆ ಆಗಮಿಸಿ ನೀರು ಪೂರೈಸದ ಗ್ರಾಮ ಪಂಚಾಯಿತಿ ಹಾಗೂ ತಾಲ್ಲೂಕು ಆಡಳಿತದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಡಿವಾಳಮ್ಮ ಅಗಸರ ಮಾತನಾಡಿ, ಪ್ರತಿ ವರ್ಷ ಬೇಸಿಗೆಯಲ್ಲಿ ನಮ್ಮ ಗ್ರಾಮ ವ್ಯಾಪ್ತಿಯಲ್ಲಿ ಕುಡಿಯುವ ನೀರು ದೊರೆಯದೇ ತುಂಬಾ ತೊಂದರೆಯಾಗುತ್ತಿದೆ. ಗ್ರಾಮದಲ್ಲಿಯ ಬೊರೆವೆಲ್ ನೀರು ಕುಡಿಯಲು ಯೋಗ್ಯವಾಗಿಲ್ಲ. ಇನ್ನೂ ಕೆಲವು ಬೊರೆವೆಲ್‌ಗಳು ಕೆಟ್ಟು ಹೋಗಿವೆ. ಕುಡಿಯುವ ನೀರು ದೊರೆಯುವ ಏಕೈಕ ಭಾವಿಯಲ್ಲಿ ನೀರು ಆಳಕ್ಕೆ ಇಳಿದಿದೆ. ಇನ್ನೂ ಗ್ರಾಮ ಪಂಚಾಯಿತಿ 15 ದಿನಗಳಿಗೊಮ್ಮೆ ನೀರು ಪೂರೈಸುತ್ತದೆ ಹೀಗಾದರೆ ಜೀವನ ಮಾಡುವುದಾದರೂ ಹೇಗೆ ಎಂದು ಪ್ರಶ್ನೀಸಿ ತಮ್ಮ ಅಸಹಾಯಕತೆ ವ್ಯಕ್ತಪಡಿಸಿದರು.

ಗ್ರಾಮ ಪಂಚಾಯಿತಿ ಸದಸ್ಯ ಸಲೀಮ್ ವಠಾರ ಹಾಗೂ ಸಾಹಿರಾಭಾನು ಬಾಗಲಕೋಟ ಮಾತನಾಡಿ, ಕೂಡಲೇ ಗ್ರಾಮದಲ್ಲಿ ಟ್ಯಾಂಕರ್ ಮೂಲಕ ನೀರು ಪೂರೈಸಬೇಕು. ಇಲ್ಲವಾದರೆ ಭಾವಿಯ ಹತ್ತಿರ ಬೊರೆವೆಲ್ ಕೊರೆಯಿಸಿ ಸಿಹಿನೀರು ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತಾ, ನೀರಿನ ಸಮಸ್ಯೆ ನಿವಾರಣೆಗಾಗಿ ತಾಲ್ಲೂಕು ಆಡಳಿತಕ್ಕೆ ಪ್ರತಿವರ್ಷ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ. ಆದ್ದರಿಂದ ಈ ಬಾರಿ ಮಕ್ಕಳೊಂದಿಗೆ ಖಾಲಿ ಕೊಡ ಹಿಡಿದುಕೊಂಡು ಪ್ರತಿಭಟನೆಗೆ ಇಳಿದಿದ್ದೇವೆ. ಆದರೆ ಇಂದು ತಹಶೀಲ್ದಾರ ನೆಪಕ್ಕಾದರೂ ಸಮಾದಾನದಿಂದ ನಮ್ಮ ಸಮಸ್ಯೆ ಕೇಳದೇ, ನಿಮ್ಮ ಗ್ರಾಮಕ್ಕೆ ಬರುತ್ತೇನೆ ಈಗ ಕಚೇರಿ ಮುಂದಿನಿಂದ ಏಳಿ ಎಂದೂ ಹೇಳಿದ ಬಗೆ ಮಾತ್ರ ಸರಿಯೇನಿಸಲಿಲ್ಲ ಎಂದು ತಮ್ಮ ಅಸಮಾಧಾನ ವ್ಯಕ್ತಪಡಿಸಿದರು.



“ಬಿ.ಬಿ.ಇಂಗಳಗಿ ಗ್ರಾಮಕ್ಕೆ ತಾಲ್ಲೂಕು ಪಂಚಾಯಿತಿ ಅಧಿಕಾರಿಗಳ ಜೊತೆಗೆ ತೆರಳಿ ಈಗಾಗಲೇ ಭೇಟಿ ನೀಡಿದ್ದೇನೆ. ಗ್ರಾಮದಲ್ಲಿ ದಿನ ಬಳಕೆಗೆ ನೀರು ದೊರೆಯುತ್ತಿದೆ. ಆದರೆ ಸ್ವಲ್ಪ ಕುಡಿಯುವ ನೀರಿನ ಸಮಸ್ಯೆಯಿದೆ. ಇದನ್ನು ಸರಿಪಡಿಸಲು ತಾಲ್ಲೂಕು ಪಂಚಾಯಿತಿಗೆ ನಿರ್ದೇಶನ ನೀಡಲಾಗಿದೆ. ಆದರೆ ಗ್ರಾಮಸ್ಥರು ಹೇಳುವ ಮಟ್ಟದಲ್ಲಿ ನೀರಿನ ಸಮಸ್ಯೆ ಇಲ್ಲ.”

– **ಪ್ರಕಾಶ ಸಿಂದಗಿ**, ತಹಶೀಲ್ದಾರ, ದೇವರಹಿಪ್ಪರಗಿ

ಬೆಳಿಗ್ಗೆ 11 ಗಂಟೆಯಿಂದ ಸಾಯಂಕಾಲದವರೆಗೆ ಜರುಗಿದ ಧರಣಿಯಲ್ಲಿ ಶಹಜಾದಾಬಿ ಆವೇರಿ, ಫಾತಿಮಾ ಬಾಗಲಕೋಟ, ಲಾಲಬಿ ನಧಾಫ್, ಹಜರತಬಿ ನಧಾಫ್, ಇಂದ್ರಾಬಾಯಿ ಅಗಸರ, ಹುಸೇನಬಿ ಶೇಖ್, ಸಾಹಿರಾಬೇಗಂ ನಧಾಫ್, ಇಮಾಮಬಿ ನಧಾಫ್, ರೋಷನಬಿ ಆವೇರಿ, ಶಾರದಾ ಮೀನಗಾರ, ಶರಣಮ್ಮ ಕದನಳ್ಳಿ, ಹಲಿಮಾ ವಠಾರ, ಜಯಶ್ರೀ ಮಲ್ಲೇದ, ಪರ್ವೀನ್ ಬಾಗಲಕೋಟ, ಖಾಜಾಬಿ ನಧಾಫ್, ಬಿಸ್ಮಿಲ್ಲಾ ವಠಾರ, ಮಹಾದೇವಿ ಮಲ್ಲೇದ, ಮಾಲನಬಿ ಬಾಗಲಕೋಟ, ಕೌಸರಬಿ ವಠಾರ ಸೇರಿದಂತೆ ಇತರರು ಇದ್ದರು.

## ವಿಜಯಪುರದ ಸಂಸ್ಕೃತಿ ಕಾಲೊನಿಯಲ್ಲಿ ಮಾಹೂರಿ ಜಿ–ಫ್ರೆಶ್ ಸೂಪರ್ ಮಾರ್ಕೆಟ್ ಮಳಿಗೆಗೆ ಚಾಲನೆ

# ಉಪಾಯಗಳು ಜಗತ್ತನ್ನೇ ಬೆಳಗುತ್ತವೆ :ಬಬಲೇಶ್ವರ

**ಉದಯರಶ್ಮಿ ನ್ಯೂಸ್**

ವಿಜಯಪುರ: ಉಪಾಯಗಳು ಜಗತ್ತನ್ನೇ ಬೆಳಗುತ್ತವೆ. ಹಾಗೆ ಮುಳವಾಡದ ಪ್ರತಿಷ್ಠಿತ ದೇಶಪಾಂಡೆ ಮನೆತನವು ತಮ್ಮ ಉನ್ನತ ವಿಚಾರಗಳಿಂದ ಹಲವು ಕ್ಷೇತ್ರಗಳಲ್ಲಿ ಯಶಸ್ಸು ಸಾಧಿಸಿದ್ದಾರೆಂದು ಆಕ್ಸಫರ್ಡ್ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಸಂಗಮೇಶ ಬಬಲೇಶ್ವರ ಹೇಳಿದರು.

ಗುರುವಾರ ನಗರದ ಸಂಸ್ಕೃತಿ ಕಾಲೊನಿಯಲ್ಲಿ ಮಾಹೂರಿ ಜಿ–ಫ್ರೆಶ್ ಸೂಪರ್ ಮಾರ್ಕೆಟ್ ಮಳಿಗೆ ಉದ್ಘಾಟಿಸಿ ಅವರು ಮಾತನಾಡಿದರು.

ಹತ್ತಾರು ಯುವಕರಿಗೆ ಉದ್ಯೋಗಾವಕಾಶ ಕಲ್ಪಿಸುವ ಜನೋಪಯೋಗಿ ಉದ್ದಿಮೆ ಆರಂಭಿಸಿದ ದೇಶಪಾಂಡೆ ಅವರು ಇದರಲ್ಲಿ ಯಶಸ್ಸು ಕಾಣಲಿ ಎಂದು ಬಬಲೇಶ್ವರ ಹಾರೈಸಿದರು.

ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ವಿಜೇತ ಮಕ್ಕಳ ಸಾಹಿತಿ ಪ.ಗು.ಸಿದ್ದಾಪೂರ ಮಾತನಾಡಿ, ಆದರ್ಶ ಕುಟುಂಬಗಳು ಇನ್ನೂ ನಶಿಸಿಲ್ಲ ಎನ್ನುವುದಕ್ಕೆ ದೇಶಪಾಂಡೆ ಮನೆತನವೇ ಸಾಕ್ಷಿ. ದೇಶಪಾಂಡೆ ಅವರು ಮುಳವಾಡದೊಂದಿಗೆ ಈಗ ವಿಜಯಪುರದಲ್ಲೂ ತಮ್ಮ ಹೆಜ್ಜೆಗುರುತು ಮೂಡಿಸಿದ್ದಾರೆ. ತಾವಷ್ಟೇ ಉದ್ಯೋಗಿಗಳಾಗದೇ ಹಲವರಿಗೆ ಉದ್ಯೋಗ ನೀಡುವ ಸುಪರ್ ಮಾರ್ಕೆಟ್ ಆರಂಭಿಸಿದ್ದು ಶ್ಲಾಘನೀಯ ಎಂದರು.

ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಉಪಾಧ್ಯಕ್ಷ ಇಂದುಶೇಖರ ಮಣೂರ ಮಾತನಾಡಿ, ಈ ಭಾಗದ ನಿವಾಸಿಗಳ ಅಗತ್ಯತೆಯನ್ನು ಮನಗಂಡು ಸನಾತನ ದೇಶಪಾಂಡೆ ಮತ್ತು ಪ್ರಜಕ್ತ ದೇಶಪಾಂಡೆ ದಂಪತಿ ಇಲ್ಲಿ ಅತ್ಯಾಧುನಿಕ ಸುಪರ್ ಮಾರ್ಕೆಟ್ ಮಳಿಗೆ ಆರಂಭಿಸಿ ಗುಣಮಟ್ಟದ ಉತ್ಪನ್ನಗಳನ್ನು ಪೂರೈಸಲು ಮುಂದಾಗಿದ್ದು ಇದರ ಪ್ರಯೋಜನವನ್ನು ಗ್ರಾಹಕರು ಪಡೆಯಬೇಕು ಎಂದು ಆಶಿಸಿದರು.



ಮುಳವಾಡದ ಮಾಜಿ ಪ್ರಧಾನ ಎಸ್. ಆರ್ ಪಾಟೀಲ, ವೆಂಕಟೇಶ್ ದೇಶಪಾಂಡೆ ಮಾತನಾಡಿದರು.

ಸಾನಿಧ್ಯ ವಹಿಸಿದ ನಗರದ ಸಿದ್ಧಾರೂಢ ಮಠದ ಶಂಕರಾನಂದ ಸ್ವಾಮೀಜಿ ಆಶೀರ್ವಚನ ನೀಡಿದರು.

ಸದಾಶಿವರಾವ್ ದೇಶಪಾಂಡೆ, ಡಿ. ಎಸ್.ದೇಶಪಾಂಡೆ, ಸನಾತನ ದೇಶಪಾಂಡೆ ವೇದಿಕೆ ಮೇಲಿದ್ದರು.

ಡಿ.ಎಸ್.ದೇಶಪಾಂಡೆ ಸ್ವಾಗತಿಸಿ, ವಂದಿಸಿದರು.

ಶ್ರೀಮತಿ ಅರುಂಧತಿ ದೇಶಪಾಂಡೆ, ಡಾ.ಭುವನ್ ದೇಶಪಾಂಡೆ, ಶ್ರೀಮತಿ ಪ್ರಜಕ್ತ ದೇಶಪಾಂಡೆ ಸೇರಿದಂತೆ ಹಲವರಿದ್ದರು.

ಪುಣೆ ನಮ್ಮವರು ಸಂಘದಿಂದ ಮಹಿಳಾ ದಿನಾಚರಣೆ | ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತು ಪುಣೆ ಘಟಕದ ವಾರ್ಷಿಕೋತ್ಸವ

# ಮಹಾರಾಷ್ಟ್ರದ ಪುಣೆಯಲ್ಲಿ ಕನ್ನಡದ ಕಲರವ

**ಉದಯರಶ್ಮಿ ನ್ಯೂಸ್**

ಪುಣೆ: ನಗರದಲ್ಲಿ 'ನಮ್ಮವರು ಸಂಘ'ದಿಂದ ಮಹಿಳಾ ದಿನಾಚರಣೆ ಹಾಗೂ ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತು ಪುಣೆ ಘಟಕ ದ ಎರಡನೆಯ ವಾರ್ಷಿಕೋತ್ಸವವನ್ನು ಏ.13ರಂದು ತಾರಂಗಣ ಸಭಾಗೃಹದಲ್ಲಿ ಆಚರಿಸಲಾಯಿತು.




ಕಾರ್ಯಕ್ರಮಕ್ಕೆ ಆಗಮಿಸಿದ ಗಣ್ಯರು ಹಾಗೂ ಮುಖ್ಯ ಅತಿಥಿಗಳು ದೀಪ ಬೆಳಗಿಸಿ, ನಾಡಗೀತೆ ಹಾಡಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಶ್ರೀಮತಿ ವಿರಜಾ ಭಟ್ ಮತ್ತು ಚಂದ್ರಕಾಂತ ಹಾರಕುಡೆ ಅವರು ನಮ್ಮವರು ಸಂಘದ ಎಲ್ಲಾ ಕೆಲಸ ಕಾರ್ಯಗಳನ್ನು ಹೊಗಳಿ ಹಾರೈಸಿದರು. ಬಸವರಾಜ ಹಿರೇಮಠ ನಮ್ಮವರು ಸಂಘ ಮತ್ತು ಮಕ್ಕಳ ಸಾಹಿತ್ಯ ಸಮ್ಮೇಳನದ ಬಗ್ಗೆ ವಿವರಣೆ ನೀಡಿ ಮುಂಬರುವ ಹಲವಾರು ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಿದರು.

ಇದೇ ಸಂದರ್ಭದಲ್ಲಿ ನಮ್ಮವರು ಸಂಘದ ನೂತನ ಕಾರ್ಯಕಾರಿ ಸಮಿತಿಯಲ್ಲಿ ಭಾರ್ಗವ, ವೇಣು ಅಚ್ಯುತ್, ಶಿವಣ್ಣ ಪಟ್ಟಣ, ಸತೀಶ್ ಮೆಣಸಿಗಿ, ವೆಂಕಟೇಶ ಕುಲ್ಕರ್ಣಿ, ಶ್ರೀ ಅಂಕಿತ, ಹಾಗೂ ಸಂಗಮೇಶ ಗುಲ ಅ ವರನ್ನು ಸನ್ಮಾನಿಸಿ ತಂಡಕ್ಕೆ ಬರಮಾಡಿಕೊಂಡರು ಮತ್ತು ಮಕ್ಕಳ ಸಾಹಿತ್ಯ ಪರಿಷತ್ತಿನ ಹೊಸ ಪದಾಧಿಕಾರಿಗಳಾಗಿ ಶ್ರೀಮತಿ ಝಾನ್ಸಿ ರಾವ್, ಶ್ರೀಮತಿ ಕವಿತಾ ಮಹೇಶ, ಶ್ರೀಮತಿ ಜಯವಿ-ಜಯಾ ರಾವ ಮತ್ತು ಕುಮಾರಿ ಸಂಸ್ಕೃತಿ ಚೌಗಲೆರವರನ್ನು ನೇಮಕ ಮಾಡಲಾಯಿತು. ಶ್ರೀಮತಿ ಹೇಮಾ ಮಳಗಿ ಅವರು ನಮ್ಮವರು ಕನ್ನಡ ಕಲಿ ಬೇಸಿಗೆ ಕ್ಲಾಸ್ ಬಗ್ಗೆ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಸೇ-ರಿದ್ದ ಗಣ್ಯರು ನಮ್ಮವರು ಸಂಘ ಉದ್ದೇಶಿಸಿ ಮಾತನಾಡಿ ತಮ್ಮ ಅನಿಸಿಕೆಗಳು ಮತ್ತು ಸಲಹೆಗಳನ್ನು ಹಂಚಿಕೊಂಡರು.

ವಿಶೇಷವಾಗಿ, ಮಕ್ಕಳ ಸಾಹಿತ್ಯ ಸಮ್ಮೇಳನದ ಆಚ ರಣೆಯಲ್ಲಿ ಮಕ್ಕಳಲ್ಲಿ ಕನ್ನಡ ಭಾಷೆ, ಜಾನಪದ ಸಾಹಿತ್ಯ ಮತ್ತು ಕಲೆಗಳ ಬಗ್ಗೆ ಅರಿವು ಮೂಡಿಸಲು ಮಕ್ಕಳಿಗಾಗಿ ಭಾಷಣ, ಕವನ ಹಾಗೂ ಜಾನಪದ ಹಾಡುಗಳಿಗೆ ನೃತ್ಯಗಳು ಮತ್ತು ಜಾನಪದ ಹಾಡುಗಳನ್ನು ಹಾಡುವ ಮೂಲಕ ಮಕ್ಕಳು ಕನ್ನಡ ಭಾಷೆಗೆ ಹೆಚ್ಚಿನ ಮೆರಗು. ತಂದರು. ಮಹಿಳೆಯರಿಗಾಗಿ ಭಾರತದ ಬೇರೆ ಬೇರೆ ರಾಜ್ಯಗಳ ವೇಷ ಭೂಷಣ ಸ್ಪರ್ದೆ ಹಾಗೂ ದಂಪತಿಗಳಿಗಾಗಿ ಗಂಡ-ಗುಂಡಿ ವಿನೂತನ ಹೆಸರನ್ನು ಸ್ಪರ್ಧೆಗೆ ಸೂಚಿಸಲಾಗಿತ್ತು ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲ ದಂಪತಿಗಳು ಆನಂದ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಆಕರ್ಷಣೆಯಾದ ಸ್ಟ್ಯಾಂಡ್‌ಅಪ್ ಕಾಮಿಡಿಯನ್ ಸುಬ್ರಹ್ಮಣ್ಯ ಹೆಗಡೆರವರು ತಮ್ಮ ಹಾಸ್ಯ ಮಾತುಗಳಿಂದ ಎಲ್ಲರನ್ನೂ ಮನಃ ಪೂರ್ತಿ ನಗುವಂತೆ ಮಾಡಿದರು.

ಇದೆ ಸಂದರ್ಭದಲ್ಲಿ ಹೊಸ ವರ್ಷ ಯುಗಾದಿ ಹಬ್ಬ ಆಚ-ರಿಸಿದ್ದು ಕಾರ್ಯಕ್ರಮಕ್ಕೆ ಮೆರುಗು ತಂದಿತು. ನಮ್ಮವರು ಸಂಘದ ಚಿಕ್ಕ ಮಕ್ಕಳು ಹಾಗೂ ಹಿರಿಯರು ವಿವಿಧ ಬಗೆಯ ಹಾಡು, ನೃತ್ಯಗಳಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಇವೆಲ್ಲವನ್ನೂ ನೋಡಿ ನೆರೆದ ಜನರೆಲ್ಲ ಸಂಭ್ರಮಪಟ್ಟರು.

ಬಸವರಾಜ ಪಟ್ಟಣಶೆಟ್ಟಿ ಹಾಗೂ ಅಮಿತ ಇನಾಮದಾರ್ ಕಾರ್ಯಕ್ರಮದ ಮೇಲ್ವಿಚಾರಣೆಯನ್ನು ವಹಿಸಿದ್ದರು. ನಮ್ಮವರು ಸಂಘದ ಅನೇಕ ಸದಸ್ಯರು ಉಪಸ್ಥಿತರಿದ್ದರು.

ಕಾರ್ಯಕ್ರಮದ ನಿರ್ವಾಹಣೆ ಬಿಂದುಮಾಧವ ದೇಸಾಯಿ, ಪರಾಗ ಮುಳಗುಂದ, ಅಂಕಿತ, ಶ್ರೀಮತಿ ಶಾಂತಲಾ ಬಿರಾದರ, ಹಾಗೂ ಶ್ರೀಮತಿ ವಿದ್ಯಾ ಮದಲಿಯವರು ನಡೆಸಿಕೊಟ್ಟರು.

ಶ್ರೀಮತಿ ಜಾನ್ಸಿ ರಾವ್ ಅವರು ವಂದನಾರ್ಪಣೆ ಸಲ್ಲಿಸುವ ಮೂಲಕ ಕಾರ್ಯಕ್ರಮಕ್ಕೆ ತೆರೆಬಿದ್ದಿತು.

ಚಹಾ ಹೋಟೆಲಲ್ಲಿ ಚೂಡಾ ತಿನ್ನುವಾಗಲೇ ಆಲಗೂರರಿಗೆ ಬಂತು ಖರ್ಗೆ ಕರೆ!

# ರಾಜು ಆಲಗೂರ ಗೆಲ್ಲುವ ಅಭ್ಯರ್ಥಿ :ಮಲ್ಲಿಕಾರ್ಜುನ ಖರ್ಗೆ

**ಉದಯರಶ್ಮಿ ನ್ಯೂಸ್**

ವಿಜಯಪುರ: ತಮ್ಮ ಸರಳತೆ, ಸಜ್ಜನಿಕೆಯಿಂದಲೇ ಮತದಾರರ ಮನಸ್ಸು ಗೆಲ್ಲುತ್ತಿರುವ ಕಾಂಗ್ರೆಸ್‌ನ ಲೋಕಸಭೆ ಅಭ್ಯರ್ಥಿ ಪ್ರೊ.ರಾಜು ಆಲಗೂರ ಅವರು ಗುರುವಾರ ಬೆಳಗ್ಗೆ ಸಾಮಾನ್ಯರ ಜತೆಗೇ ಕುಳಿತು ಉಪಹಾರ ಸೇವಿಸಿದ್ದು ವಿಶೇಷವಾಗಿತ್ತು.



ಹೀಗೆ ಜನಸಾಮಾನ್ಯರ ಜತೆ ಪ್ರಚಾರಕ್ಕೂ ಮುನ್ನ ನಗರದ ಸೊಲ್ಲಾಪುರ ರಸ್ತೆಯ ಬಿಎಲ್ಡಿಇ ಆವರಣದ ಮುಂದಿನ ಕ್ಯಾಂಟೀನ್‌ವೊಂದರಲ್ಲಿ ಚಹಾ ಕುಡಿಯುತ್ತ ಚರ್ಚಿಸುತ್ತಿದ್ದಾಗಲೇ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರ ಕರೆ ಬಂದಿದ್ದು ಮತ್ತೂ ವಿಶೇಷವಾಗಿತ್ತು. ಖರ್ಗೆಯವರು ಚುನಾವಣೆ ಕುರಿತು ಮಾಹಿತಿ ಪಡೆದು, ಹೇಗೆ ನಡೆಯುತ್ತಿದೆ ಪ್ರಚಾರ? ನಿಮ್ಮ ಬಗ್ಗೆ ಹೈಕಮಾಂಡ್‌ಗೆ ಒಳ್ಳೆಯ ವರದಿ ಬಂದಿದೆ. ನೀವು ಗೆಲ್ಲುವ ಅಭ್ಯರ್ಥಿಯಾಗಿದ್ದೀರಿ. ಎಲ್ಲರ ಸಹಕಾರ ಪಡೆಯಿರಿ ಎಂದು ಹೇಳಿದರು. ಹೋಟೆಲ್‌ವೊಂದರಲ್ಲಿ ಇರುವುದಾಗಿ ಹೇಳಿದ ಆಲಗೂರರು, ಜಿಲ್ಲೆಯ ಎಲ್ಲ ಪ್ರಮುಖ ನಾಯಕರು ಹಗಲಿರುಳು ಶ್ರಮಿಸುತ್ತಿದ್ದಾರೆ. ಎಲ್ಲರೂ ಒಮ್ಮತ ಹಾಗೂ ಉತ್ಸಾಹದಿಂದ ಬೆನ್ನಿಗಿದ್ದು ಪಕ್ಷದ ಗೆಲುವಿಗಾಗಿ ಶತ ಪ್ರಯತ್ನ ಮಾಡುತ್ತಿದ್ದಾರೆ. ಕೆಳ ಹಂತದಿಂದ ಮತದಾರರನ್ನು ತಲುಪುತ್ತಿದ್ದೇವೆ ಎಂದು ವಿವರಿಸಿದರು.

ಖರ್ಗೆಯವರು ಇದಕ್ಕುತ್ತರಿಸಿ, 'ನೀವು ಗೆದ್ದೇ ಗೆಲ್ಲುತ್ತೀರಿ. ಇದೇ ಉತ್ತಮ ಸ್ಥಿತಿಯನ್ನು ಕಾಯ್ದುಕೊಂಡು ಹೋಗಬೇಕು' ಎಂದು ಹೇಳಿ ಹಲವು ಸೂಚನೆ, ಸಲಹೆಗಳನ್ನು ಕೊಟ್ಟರು.

ನಾಷ್ಟಾ ಜೊತೆ ಚರ್ಚೆ, ಆಪ್ತ ಮಾತು ಉಪಹಾರ ಮಾಡುತ್ತ ಆಲಗೂರರು ಹೋಟೆಲ್ಗೆ ಬಂದವರ ಜೊತೆಗೆ ಮಾತನಾಡುತ್ತ ರಾಜ-ಕಾರಣ ಹೊರತುಪಡಿಸಿ ಅವರ ಕುಶಲೋಪರಿ ವಿಚಾರಿಸುತ್ತಿದ್ದರು. ದೇಶದ ಇಂದಿನ ಸ್ಥಿತಿ, ಬೆಲೆ ಏರಿಕೆ ಬಗ್ಗೆಯೂ ಹಲವರು ಮಾತನಾಡಿದರು. 'ನೀವು ಹೀಗೆ ಎಲ್ಲರೊಂದಿಗೆ ಬೆರೆಯುತ್ತೀರಿ. ಸದ್ಯದ ಸಂಸದರು ನಮಗೆ ಮುಖವನ್ನೇ ತೋರಿಸಿಲ್ಲ. ಈಗ ಚುನಾವಣೆ ಬಂದಾಗ ಅವರ ಮುಖ ನೋಡುತ್ತಿದ್ದೇವೆ. ನಿಮ್ಮಂತಹವರು ಜನಪ್ರತಿನಿಧಿಗಳಾದರೆ ಉತ್ತಮ ಎಂದರು.

ನೀವು ಆಯ್ಕೆಯಾದರೆ ನಗರಕ್ಕೆ ರೈಲು, ವಿಮಾನಯಾನ, ಪ್ರವಾಸಿ ತಾಣವಾಗಿ ಅಭಿವೃದ್ಧಿ, ಮೂಲ ಸೌಕರ್ಯಗಳಂತಹ ಮಹತ್ವದ ಕೆಲಸ ಮಾಡಬೇಕು ಎಂದು ತಮ್ಮ ಪಟ್ಟಿ ಮುಂದಿಟ್ಟರು. ಇದಕ್ಕೆ ಪ್ರತಿಕ್ರಿಯಿಸಿದ ಆಲಗೂರ್, ಈಗಾಗಲೇ ಎರಡು ಬಾರಿ ಶಾಸಕನಾಗಿ, ನಿಗಮದ ಅಧ್ಯಕ್ಷನಾಗಿ ದುಡಿದಿದ್ದೇನೆ. ನೀವು ಈ ಬಾರಿ ವಿಶ್ವಾಸವಿಟ್ಟು ಮತ ಹಾಕಿದರೆ ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲರ ಪುತ್ರ ಬಸವನಗೌಡ ಪಾಟೀಲ ಮತ್ತು ಡಾ.ಮಹಾಂತೇಶ ಬಿರಾದಾರ ಆಲಗೂರರಿಗೆ ಸಾಥ್ ನೀಡಿದರು.

### ಗೃಹಲಕ್ಷ್ಮಿ ರೊಕ್ಕ ಬಂದು ನಮ್ಮಂತೋರಿಗಿ ಪಾಡಾಗ್ಯಾದ್ರಿ..

ರಾಜು ಆಲಗೂರ ಅವರು ಹೋಟೆಲ್‌ನಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರ ಕಷ್ಟ-ಸುಖವನ್ನೂ ಕೇಳಿ ಆಪ್ತತೆ ಮೆರೆದರು. ಅಡುಗೆ ಕೋಣೆಗೆ ಹೋಗಿ ಹೆಣ್ಣುಮಕ್ಕಳನ್ನು ಮಾತನಾಡಿಸಿದರು. ಅಲ್ಲಿದ್ದವರು, 'ನಮಗ ಸಿದ್ದರಾಮಯ್ಯರು ತಿಂಗ್ಳಾ ಎರಡು ಸಾವಿರ ಹಾಕ್ತಿರೋದು, ಬಸ್ ಫ್ರೀ, ಕರೇಂಟ್ ಕೊಟ್ಟಿರೋದಕ್ಕ ಭಾಳ ಅನುಕೂಲ ಆಗ್ಯಾದ್ರಿ.. ನಮ್ಮ ಮಕ್ಕಳು ನಾವೀಗ ನೆಮ್ಮದಿಯಿಂದ ಇದ್ದೀವಿ. ಎಂ.ಬಿ.ಪಾಟೀಲರು ನಮಗ ನೀರ್ ಕೊಟ್ಟು ಭಾಳ ದೊಡ್ಡ ಉಪಗಾರ ಮಾಡ್ಯಾ-ರ್ರೀ ಸರ್..' ಎಂದು ಭಾವುಕರಾದರು. ಅಲ್ಲಿದ್ದ ಅನೇಕರು ಕೂಡ 'ನೀರಾವರಿ ಕೆಲಸಗಳನ್ನು ಶ್ಲಾಘಿಸಿದರು. 'ಹಿಂದೆ ಬಿಜಾಪುರಕ್ಕ ಗಿಂಗಳಿಗೊಮ್ಮೆ ನೀರ್ ಬರ್ತಿದ್ವು ಈಗ ಆರಾಮಿದೀವ್ರಿ.. ನಮ್ಮ ಹೊಲಾನೂ ಭೊಲೊ ಬೆಳಿಲಿಕತ್ತಾವ ಭೂಮೀಗಿ ಬಂಗಾರದ ಬೆಲಿ ಬಂದಾದ' ಎಂದು ಹೇಳಿದ್ದು ಕೇಳಿದ ಆಲಗೂರರಿಗೆ ಸಮಾಧಾನ ತಂದಿತು. ಮುಂದೆಯೂ ನಾವು ನಿಮ್ಮೊಂದಿಗೆ ಇದ್ದೇವೆ ಎಂದು ಹೇಳಿ, ಮೌನವಾಗಿ ನಮಸ್ಕರಿಸಿ ಮುನ್ನೆಡೆದರು.

# ಗ್ಯಾರಂಟಿ ಯೋಜನೆಗಳ ಸದುಪಯೋಗವಾಗಲಿ :ಡಾ.ಪ್ರಭುಗೌಡ

**ಉದಯರಶ್ಮಿ ನ್ಯೂಸ್**



ದೇವರಹಿಪ್ಪರಗಿ: ರಾಜ್ಯದಲ್ಲಿ ಈಗಾಗಲೇ ಐದು ಗ್ಯಾರಂಟಿಗಳನ್ನು ನೀಡಿ, ನುಡಿದಂತೆ ನಡೆಯಲಾಗಿದೆ ಇದನ್ನು ದೇಶದ ಪ್ರತಿಯೊಬ್ಬ ನಾಗರೀಕರಿಗೆ ದೊರಕಲು ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಬೇಕು ಎಂದು ಕಾಂಗ್ರೆಸ್ ಸಮಿತಿ ಪ್ರಧಾನಕಾರ್ಯದರ್ಶಿ ಡಾ.ಪ್ರಭುಗೌಡ ಲಿಂಗದಳ್ಳಿ(ಚಬನೂರ) ಹೇಳಿದರು.

ಪಟ್ಟಣದ 10ನೇ ವಾರ್ಡಿನಲ್ಲಿ ಗುರುವಾರ ಕಾಂಗ್ರೆಸ್ ಪಕ್ಷದ ಲೋಕಸಭಾ ಅಭ್ಯರ್ಥಿ ಪರವಾಗಿ ಜರುಗಿದ ಪ್ರಚಾರಸಭೆ ಹಾಗೂ ಗ್ಯಾರಂಟಿ ಯೋಜನೆಗಳ ಕಾರ್ಡ ವಿತರಣೆಯಲ್ಲಿ ಪಾಲ್ಗೊಂಡು ಮಾತನಾಡಿದರು.

ಕಾಂಗ್ರೆಸ್ ಬಡ, ಮಧ್ಯಮ ವರ್ಗದ ಜನರ ಏಳಿಗೆ ಬಯಸಿ ಇಂತಹ ಯೋಜನೆಗಳನ್ನು ಜಾರಿಗೆ ತಂದಿದೆ. ಇದರ ಸದುಪಯೋಗವಾಗಲಿ ಎಂದರು.

ಮಾಜಿಶಾಸಕ ಶರಣಪ್ಪ ಸುಣಗಾರ ಮಾತನಾಡಿ, ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರಕಾರ ನುಡಿದಂತೆ ನಡೆದಿದೆ. ಚುನಾವಣೆಯಲ್ಲಿ ನೀಡಿದ ಗ್ಯಾರಂಟಿಗಳನ್ನು ಅಧಿಕಾರಕ್ಕೆ ಬಂದ ತಕ್ಷಣ ಜಾರಿಗೆ ತಂದಿದೆ. ಲೋಕಸಭಾ ಚುನಾವಣೆಯಲ್ಲಿ ಗ್ಯಾರಂಟಿಗಳನ್ನು ಘೋಷಣೆ ಮಾಡುತ್ತಿದ್ದು, ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರಲಾಗುವುದು ಎಂದರು.

ಪ್ರಚಾರಸಭೆ ಹಾಗೂ ಗ್ಯಾರಂಟಿ ಕಾರ್ಡ ವಿತರಣೆಯಲ್ಲಿ ಕಾಂಗ್ರೆಸ್ ಜಿಲ್ಲಾ ಉಪಾಧ್ಯಕ್ಷ ಸಂಗನಗೌಡ ಹರನಾಳ, ಯುವ ಕಾಂಗ್ರೆಸ್ ರಾಜ್ಯಕಾರ್ಯದರ್ಶಿ ಸಂತೋಷಗೌಡ ದೊಡ್ಡಮನಿ, ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಾಯಿಕುಮಾರ ಬಿಸನಾಳ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ತಾಲ್ಲೂಕು ಅಧ್ಯಕ್ಷ ಸಾಹೇಬಗೌಡ ಬಿರಾದಾರ, ಉಪಾಧ್ಯಕ್ಷ ಪರಶುರಾಮ ದಿಂಡವಾರ, ಸದಸ್ಯರಾದ ಶೋಭಾ ಭಾವಿಕಟ್ಟಿ, ಶಾಕೀರಾ ಹೆಬ್ಬಾಳ, ಬ್ಲಾಕ್ ಮಹಿಳಾ ಕಾರ್ಯದರ್ಶಿ ಸುನಂದಾ ಸೊನ್ನಳ್ಳಿ, ಪಟ್ಟಣ ಪಂಚಾಯಿತಿ ಸದಸ್ಯ ಉಮೇಶ ರೂಗಿ, ನಾಮನಿರ್ದೇಶಿತ ಸದಸ್ಯರಾದ ರಾಜು ಮೆಟಗಾರ, ಹುಸೇನ್ ಕೊಕಟನೂರ, ಸುನೀಲ ಕನಮಡಿ, ನಜೀರ ಬೀಳಗಿ, ಪ್ರಕಾಶ ಗುಡಿಮನಿ, ಶಬ್ಬಿರ ಮುಲ್ಲಾ, ಪ್ರಕಾಶ ಮಲ್ಹಾರಿ, ಸರಿತಾ ನಾಯಿಕ, ಸೈಯ್ಯದ ರೂಗಿ, ಮಹೇಶ ಮುರಾಳ, ಕುಮಾರ ಪವಾರ ಸೇರಿದಂತೆ ಪದಾಧಿಕಾರಿಗಳು, ಕಾರ್ಯಕರ್ತರು, ಮಹಿಳೆಯರು ಪಾಲ್ಗೊಂಡಿದ್ದರು.

# ಸಂಸ್ಕಾರ-ಶಿಕ್ಷಣದಿಂದ ಸಾಮರಸ್ಯದ ಬದುಕು ಸಾಧ್ಯ

**ಉದಯರಶ್ಮಿ ನ್ಯೂಸ್**



ದೇವರಹಿಪ್ಪರಗಿ: ಸಾಮರಸ್ಯದಿಂದ ಬದುಕಲು ಸಂಸ್ಕಾರ ಹಾಗೂ ಶಿಕ್ಷಣ ಅತ್ಯಗತ್ಯವಾಗಿವೆ ಎಂದು ಸ್ಥಳೀಯ ಗದ್ದುಗೆಮಠ ಮಡಿವಾಳೇಶ್ವರ ಸ್ವಾಮೀಜಿ ಹೇಳಿದರು.

ಪಟ್ಟಣದಲ್ಲಿ ನೂತನವಾಗಿ ನಿರ್ಮಾಣಗೊಂಡ ಮಸೀದೆ ಉದ್ಘಾಟನಾ ಕಾರ್ಯಕ್ರಮದ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

ಸಮುದಾಯದ ಸಂಸ್ಕಾರ ಹಾಗೂ ಅನುಕೂಲಕ್ಕಾಗಿ ವಕೀಲ ಎ.ಎಂ. ತಾಂಬೋಳಿ ತಮ್ಮ ಧರ್ಮಪತ್ನಿ ಸ್ಮರಣಾರ್ಥ 25 ಲಕ್ಷ.ರೂಗಳ ವೆಚ್ಚದಲ್ಲಿ ಸ್ವಂತ ಮಸೀದಿ ನಿರ್ಮಾಣ ಮಾಡಿರುವ ಕಾರ್ಯ ಶ್ಲಾಘನೀಯ. ಆಧು-ನಿಕತೆಯ ಧಾವಂತದಲ್ಲಿ ಇಂದು ಧಾರ್ಮಿಕ ಚಿಂತನೆ ಕಡಿಮೆ ಆಗುತ್ತಿದೆ. ಮಕ್ಕಳಲ್ಲಿ ಸಂಸ್ಕೃತಿ, ಸಂಸ್ಕಾರ, ಸಭ್ಯತೆ ರೂಡಿಯಾಗಬೇಕು. ಧಾರ್ಮಿಕ ಚಿಂತನೆಯ ಕಲ್ಪನೆ ಮೂಡಬೇಕು. ಯುವ ಜನಾಂಗಕ್ಕೆ ಮಾದರಿಯಾಗಿ ಇದರ ಸದುಪಯೋಗವಾಗಲಿ ಎಂದರು.

ಶಾಸಕ ರಾಜುಗೌಡ ಪಾಟೀಲ (ಕುದರಿಸಾಲವಾಡಗಿ) ಹಾಗೂ ರಾಜ್ಯ ಕೆಪಿಸಿಸಿ ವಕ್ತಾರ ಎಸ್.ಎಂ. ಪಾಟೀಲ (ಗಣಿಹಾರ)ಮಾತನಾಡಿ, ಸಮಾಜದ ಸಾಮರಸ್ಯಕ್ಕೆ ಮೊದಲು ಶಿಕ್ಷಣ ಅಗತ್ಯ. ಅದಕ್ಕಾಗಿ ಉತ್ತಮ ಶಿಕ್ಷಣ ಕೊಡಿಸಲು ಪಾಲಕರು ಪ್ರಯತ್ನಿಸಬೇಕು. ಶಿಕ್ಷಣದಿಂದಲೇ ಎಲ್ಲವೂ ಸಾಧ್ಯ. ಮಸೀದೆ ಜೊತೆಗೆ ಉತ್ತಮ ಶಿಕ್ಷಣ ಸಂಸ್ಥೆ ಕಟ್ಟಿ, ನೂರಾರು ವಿದ್ಯಾರ್ಥಿಗಳ ಬಾಳಿಗೆ ಬೆಳಕಾಗಬೇಕೆಂದು ಮನವಿ ಮಾಡಿದರು.

ಕಾರ್ಯಕ್ರಮ ಸಂಘಟಕ ನ್ಯಾಯವಾದಿ ಎ.ಎಂ. ತಾಂಬೋಳಿ, ಬಿಎಸ್‌ಪಿ ರಾಜ್ಯ ಪ್ರಧಾನಕಾರ್ಯದರ್ಶಿ ದಸ್ತಗೀರ ಮುಲ್ಲಾ, ಡಾ.ಆರ್.ಆರ್.ನಾಯಿಕ, ಮೌಲಾನಾ ಹಫೀಜ್ ಗಿರಗಾಂವಿಕರ, ಕಬೂಲ್ ಕೊಕಟನೂರ ಮಾತನಾಡಿದರು.

ಪಟ್ಟಣದ ಆವುಗೇಶ್ವರ ಶ್ರೀ ಆಶೀರ್ವಚನ ನೀಡಿದರು.

ಇದೇ ಸಂದರ್ಭದಲ್ಲಿ ಪ್ರತಿಶತ 90ಕ್ಕೂ ಹೆಚ್ಚು ಅಂಕ ಪಡೆದ ಮಹಾತ್ಮಾ ಗಾಂಧೀ ಕಾಲೇಜಿನ ಪ್ರತಿಭಾವಂತ ವಿದ್ಯಾರ್ಥಿನಿಯರನ್ನು ಸನ್ಮಾನಿಸಲಾಯಿತು.

ಜೆಡಿಎಸ್ ಜಿಲ್ಲಾ ಉಪಾಧ್ಯಕ್ಷ ರಿಯಾಜ ಯಲಗಾರ, ಕಾಂಗ್ರೆಸ್ ಧುರೀಣ ಸಂತೋಷಗೌಡ ದೊಡ್ಡಮನಿ, ಎ.ಎನ್.ಚಟ್ಟರಕಿ, ನಜೀರಸಾಬ್ ಬೀಳಗಿ, ಮಹಿಬೂಬ್ ಹುಂಡೇಕಾರ, ಲಾಲಾಸಾಬ್ ಮಳಖೇಡ, ಹಸನ್ ವಡ್ಡೋಡಗಿ, ಹಿದಾಯತ್ ಮಾಶಾಳಕರ, ಸಲೀಮ ಶೇಖ, ಅಬ್ದುಲ್‌ಜಬ್ಬಾರ ಮೊಮೀನ, ಮುನ್ನಾ ಮಳಖೇಡ, ಬಂದೇನವಾಜ್ ಕತ್ನಳ್ಳಿ, ಸಯೀದ ರೂಗಿ, ರೆಹಮಾನ್ ವಡ್ಡೋಡಗಿ ಸೇರಿದಂತೆ ಮಹಿಳೆಯರು, ಮಕ್ಕಳು ಇದ್ದರು.

ಬೇಸಿಗೆ ಮಳೆ ವೇಳೆ ಜೀವಹಾನಿ ಹೆಚ್ಚು | ಕಂದಾಯ ಇಲಾಖೆ ವಿಪತ್ತು ನಿರ್ವಹಣೆ ಕಿವಿಮಾತು

# ಮುನ್ನೆಚ್ಚರಿಕೆ ವಹಿಸಿ ಸಿಡಿಲಿನಿಂದ ರಕ್ಷಿಸಿಕೊಳ್ಳಿ :ಗದ್ಯಾಳ

**ಉದಯರಶ್ಮಿ ನ್ಯೂಸ್**

ಇಂಡಿ: ಬೇಸಿಗೆಯ ಮಳೆ ವೇಳೆ ಬಡಿಯುವ ಸಿಡಿಲಿನಿಂದ ಆಗುತ್ತಿರುವ ಜೀವ ಹಾನಿ ಪ್ರಕರಣಗಳಿಂದ ಎಚ್ಚೆತ್ತು ಕೊಂಡಿರುವ ರಾಜ್ಯ ಕಂದಾಯ ಇಲಾಖೆ ವಿಪತ್ತು ನಿರ್ವಹಣೆ ಜೀವಹಾನಿ ತಪ್ಪಿಸಲು ಮಾರ್ಗಸೂಚಿ ಪ್ರಕಟಿಸಿ ತಾಲೂಕಿನ ಜನರಿಗೆ ಮುನ್ನೆಚ್ಚರಿಕೆ ವಹಿಸಲು ಕಂದಾಯ ಉಪವಿಬಾಗಾಧಿಕಾರಿ ಅಬೀದ್ ಗದ್ಯಾಳ ಸೂಚಿಸಿದ್ದಾರೆ.

ತಾಲೂಕಿನಲ್ಲಿ ಸಧ್ಯ ಮಳೆ ಕೊರತೆ ಇದ್ದರೂ ಮುಂಬರುವ ಪೂರ್ವ ಮುಂಗಾರು ಸಮಯದಲ್ಲಿ ಗುಡುಗು ಸಿಡಿಲಿನ ಅಬ್ಬರ ಹೆಚ್ಚಿರುವ ಮುನ್ನಸೂಚನೆಯಿದೆ. ಆದ್ದರಿಂದ ಸಾರ್ವಜನಿಕರು ಏನೆಲ್ಲ ಎಚ್ಚರಿಕೆ ವಹಿಸಬೇಕು ಎಂಬುದರ ಬಗ್ಗೆ ಸಲಹೆಗಳನ್ನು ಪ್ರಕಟಿಸಿದೆ.

ಸಿಡಿಲು ಸಾಮಾನ್ಯವಾಗಿ ಮಧ್ಯಾಹ್ನ ಅಥವಾ ಸಂಜೆ ಸಂಭವಿಸುವ ಸಾಧ್ಯತೆ ಹೆಚ್ಚಾಗಿರುತ್ತದೆ. ಈ ವೇಳೆ ಅನಿವಾರ್ಯವಿದ್ದಲ್ಲಿ ಮಾತ್ರ ಹೊರಗೆ ಹೋಗಬೇಕು.

ಕೃಷಿ ಕ್ಷೇತ್ರದಲ್ಲಿ ಕೆಲಸ ಮಾಡುವವರು ಜಾನುವಾರು ಮೇಯಿಸುವವರು, ಸಾಮಾನ್ಯ ಪ್ರಯಾಣಕ್ಕಾಗಿ ಮನೆಯಿಂದ ಹೊರಗೆ ಹೋಗದಿರುವುದು ಒಳ್ಳೆಯದು.





ಲೋಹದ ತಗಡನ್ನು ಹೊದಿಸಿರುವ ಮನೆಗಳು ಸುರಕ್ಷಿತವಲ್ಲ. ಸುರಕ್ಷಿತವಾದ ಕಟ್ಟಡಗಳಾದ ಮನೆ, ಕಚೇರಿ, ಅಂಗಡಿಗಳು ಮತ್ತು ಕಿಟಕಿ ಮುಚ್ಚಿರುವಂತಹ ವಾಹನಗಳಲ್ಲಿ ಆಶ್ರಯ ಪಡೆಯುವದು ಒಳ್ಳೆಯದು.

ಕೆರೆ ಮತ್ತು ನದಿಗಳು ಹಾಗೂ ಇನ್ನಿತರ ನೀರಿನ ಮೂಲಗಳಿಂದ ತಕ್ಷಣವೇ ದೂರವಿರುವದು, ವಿದ್ಯುತ್ ಸರಬರಾಜು ಮಾರ್ಗ, ದೂರವಾಣಿ ಸಂಪರ್ಕ, ಮೊಬೈಲ್ ಟಾವರ್, ಪವನ ವಿದ್ಯುತ್ ಗೋಪುರ, ಹಾಗೂ ರೈಲು ಹಳಿಗಳಿಂದ ದೂರವಿರುವದು, ವಾಹನ ಚಾಲನೆಯಲ್ಲಿದ್ದರೆ ತಕ್ಷಣವೇ ವಾಹನ ನಿಲ್ಲಿಸಿ ಕಿಟಕಿಗಳನ್ನು ಮುಚ್ಚಿ ಒಳಗೆ ಇರುವುದು ಸೇರಿದಂತೆ ಹಲವು ಮೂನ್ಸೂಚನೆ ನೀಡಿದ್ದಾರೆ.


ಗುಡುಗು ಮಿಂಚಿನ ಸಂದರ್ಭದಲ್ಲಿ ಮೋಬೈಲ್ ಫೋನು, ವಿದ್ಯುತ್ ಸಂಪರ್ಕ ಹೊಂದಿರುವ ದೂರವಾಣಿ ಬಳಸಬಾರದು.

ಕಬ್ಬಿಣದ ಸರಕುಗಳಿಂದ ಕೂಡಿದ ಛತ್ರಿಗಳನ್ನು ಬಳಸಬಾರದು. ಕಿಟಕಿ ಬಾಗಿಲುಗಳನ್ನು ಮುಚ್ಚಿ ಬೆಂಕಿ ಮತ್ತು ವಿದ್ಯುತ್ ಸಂಪರ್ಕದಿಂದ ದೂರವಿರಬೇಕು. ಮಕ್ಕಳು, ವಯೋವೃದ್ದರು, ಜಾನುವಾರು ಹಾಗೂ ಸಾಕುಪ್ರಾಣಿ ಗಳು ಸುರಕ್ಷಿತ ಸ್ಥಳದಲ್ಲಿ ಇರುವಂತೆ ಗಮನ ಹ-ರಿಸಬೇಕು.

ಸಿಡಿಲು ವೇಳೆ ಕೋಳಾಯಿ ಮತ್ತು ಲೋಹದ ಕೊಳವೆಗಳ ಮೂಲಕ ವಿದ್ಯುತ್ ಹರಿಯುವ ಸಾಧ್ಯತೆ ಇರುವದರಿಂದ ಉಂಟಾಗುವ ಸಂದರ್ಭದಲ್ಲಿ ಸ್ನಾನ ಅಥವಾ ಶಾವರ್ ಬಾಥ್ ತೆಗೆದುಕೊಳ್ಳಬಾರದು. ಬಟ್ಟೆ ಒಗೆಯಬಾರದು, ಗುಡುಗು ಸಿಡಿಲಿನ ಸಮಯದಲ್ಲಿ ಬಯಲು ಪ್ರದೇಶದಲ್ಲಿ ಸಿಲುಕಿಕೊಂಡಿದ್ದರೆ ತಕ್ಷಣವೇ ಹತ್ತಿರದಲ್ಲಿ ಇರುವ ಸುರಕ್ಷಿತ ಸ್ಥಳದಲ್ಲಿ ಆಶ್ರಯ ಪಡೆದು ಅಪಾಯದಿಂದ ಪಾರಾಗಬೇಕು.

ಮಿಂಚು ಬರುವ ಸಂದರ್ಭಗಳಲ್ಲಿ ಕಬ್ಬಿಣ ಹೋವ ಇರುವ ಪಾದರಕ್ಷೆಗಳು ಮತ್ತು ಕಾರಿನ ಚಕ್ರಗಳು ಸುರಕ್ಷಿತವಲ್ಲದ ಕಾರಣ ಅವುಗಳಿಂದ ದೂರ ಇರಬೇಕು.

ವಿದ್ಯುತ್ ಸಂಪರ್ಕ ಹೊಂದಿರುವಂತಹ ವಿದ್ಯುತ್ ಇಲೆಕ್ಟ್ರಿಕಲ್ ಉಪಕರಣಗಳಾದ ಕಂಪ್ಯೂಟರ್, ಲ್ಯಾಪಟಾಪ್, ವಿಡಿಯೋ ಗೇಮ್ ಸಾಧನಗಳು ಮೋಬೈಲ್ ಫೊನು, ವಾಷಿಂಗ ಮಸೀನು ಇತರೆ ವಿದ್ಯುತ್ ಉಪಕರಣಗಳ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಬೇಕು. ಬಾಕಿಲುಗಳು, ಕಿಟಕಿಗಳು, ಮಂಟಪಗಳು ಕಾಂಕ್ರೀಟ್ ನೆಲ, ಬೆಂಕಿಯು ಸ್ಥಳಗಳು, ಇತರೆ ವಿದ್ಯುತ್ ಉಪಕರಣಗಳಿಂದ ದೂರವಿರುವುದು ಒಳ್ಳೆಯದು ಎಂದು ಮಾರ್ಗಸೂಚಿಯಲ್ಲಿ ತಿಳಿಸಿದ್ದಾರೆ ಎಂದು ಗದ್ಯಾಳ ಹೇಳಿದರು.




# ಸಹಕಾರದಿಂದ ಸಾಧನೆ ಸಾಧ್ಯ :ಜಂಬಗಿ

**ಉದಯರಶ್ಮಿ ನ್ಯೂಸ್**




ಚಿಮ್ಮಡ: ಪರಸ್ಪರ ಸಹಕಾರದೊಂದಿಗೆ ಪರಿಶ್ರಮ ಸೇರಿದರೆ ಸರಕಾರಿ ಸಂಸ್ಥೆಗಳಲ್ಲಿಯೂ ಉತ್ತಮ ಸಾಧನೆ ಮಾಡಬಹುದೆಂದು ಚಿಮ್ಮಡ ಗ್ರಾಮದ ಸರಕಾರಿ ಪದವಿ ಪೂರ್ವ ವಿದ್ಯಾಲಯದ ಪ್ರಾಚಾರ್ಯ ಶರಶ್ಚಂದ್ರ ಜಂಬಗಿ ಹೇಳಿದರು.

ಗ್ರಾಮದ ಸರಕಾರಿ ಪದವಿ ಪೂರ್ವ ವಿದ್ಯಾಲಯದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ ರ್‍ಯಾಂಕ್ ವಿದಾರ್ಥಿಗಳ ಸತ್ಕಾರ ಕಾರ್ಯಕ್ರಮದಲ್ಲಿ ಮುಖ್ಯ ಅಥಿ-ತಿಗಳಾಗಿ ಭಾಗವಹಿಸಿ ಮಾತನಾಡಿದ ಅವರು ವಿದ್ಯಾರ್ಥಿಗಳು, ಪಾಲಕರು, ಶಿಕ್ಷಕರೊಂದಿಗೆ ಅಭೀವೃದ್ದಿ ಸಮೀತಿಯು ಸಹಕಾರದಿಂದ ನಮ್ಮ ವಿದ್ಯಾಲಯವು ಶೇ. ನೂರರಷ್ಟು ಫಲಿತಾಂಶ ಪಡೆಯಲು ಸಾಧ್ಯವಾಗಿದ್ದು ಇದೇ ಸಹಕಾರ ಮುಂದುವರೆದಲ್ಲಿ ಇದಕ್ಕಿಂತ ಉತ್ತಮ ಫಲಿತಾಂಶ ದೊರೆಯಲಿದೆ ಎಂದರು.

ಕಾಲೇಜು ಅಭಿವೃದ್ದಿ ಸಮೀತಿಯ ಅಧ್ಯಕ್ಷ ಬಸವರಾಜ ಕುಂಚನೂರ ಮಾತನಾಡಿ ಕಾಲೇಜು ಪ್ರಾರಂಭವಾಗಿ ಕೇವಲ ಮೂರು ವರ್ಷಗಲಾದರೂ ಖಾಸಗೀ ಶಾಲೆಗಳೂ ನೀಡದಷ್ಟು ಉತ್ತಮ ಫಲಿತಾಂಶ ನೀಡಲು ಕಾರಣೀಭೂತರಾದ ಎಲ್ಲರನ್ನು ಅಭಿನಂದಿಸುವುದಾಗಿ ತಿಳಿಸಿದರು.

ಗ್ರಾ.ಪಂ. ಮಾಜಿ ಅಧ್ಯಕ್ಷ ಪರಪ್ಪಾ ಪಾಲಭಾವಿ, ಪ್ರಭು ನೇಸೂರ, ಪ್ರವೀಣ ಮೈತ್ರಿ ಮಾತನಾಡಿದರು.

ಅಭಿವೃದ್ದಿ ಸಮೀತಿಯ ಬೀರಪ್ಪಾ ಹಳೆಮನಿ, ರಾಚಯ್ಯ ಮಠಪತಿ, ಶಂಕರಗೌಡ ಪಾಟೀಲ, ಅಪ್ಪನಪ್ಪಾ ಮುಗಳಖೋಡ, ಉಪನ್ಯಾಸಕರಾದ ಬಿ.ಬಿ. ಕುದರಿಮನಿ, ಎಚ್.ಎಂ. ಕುಂಬಾರ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಇದೇ ಸಂಧರ್ಬದಲ್ಲಿ ವಾಣಿಜ್ಯ ವಿಭಾಗದಲ್ಲಿ ಸಾಧನೆ ಮಾಡಿದ ಕುಮಾರಿ ಲಕ್ಷಿ□□ ರಮೇಶ ಗೋವಿಂದಗೋಳ, ಕುಮಾರಿ ಅಂಬಿಕಾ ಸಂಗಪ್ಪಾ ಧಡೂತಿ, ಕುಮಾರಿ ಪವಿತ್ರಾ ಮಹಾಲಿಂಗಪ್ಪಾ ಪಾಟೀಲ ಹಾಗೂ ಕಲಾ ವಿಭಾಗದಲ್ಲಿ ಕುಮಾರಿ ಬೋರಮ್ಮ ಅರ್ಜುನ ವೆಂಕತ್ಯಾಪೂರ, ಕುಮಾರಿ ರೂಪಾ ಕೆಂಚಪ್ಪಾ ನಡುವಿನಮನಿ, ಕುಮಾರಿ ಜ್ಯೋತಿ ಶ್ರೀಶೈಲ ಪಟ್ಟಣಶೆಟ್ಟಿಯವರನ್ನು ಕಾಲೇಜು ಅಭಿವೃದ್ದಿ ಸಮೀತಿಯಿಂದ ಸತ್ಕ-ರಿಸುವ ಮೂಲಕ ಗೌರವಿಸಲಾಯತು.

# ಕನಮಡಿ ಚೆಕ್‌ಪೋಸ್ಟ್ ಭೇಟಿ ನೀಡಿದ ಅನುಪಕುಮಾರ




**ಉದಯರಶ್ಮಿ ನ್ಯೂಸ್**

ವಿಜಯಪುರ: ವಿಜಯಪುರ ಲೋಕಸಭಾ ಚುನಾವಣೆ-2024ರ ವೆಚ್ಚ ವೀಕ್ಷಕ ಐ.ಆರ್.ಎಸ್‌ನ ಅಧಿಕಾರಿ ಅನುಪಕುಮಾರ ರವರು ಗುರುವಾರ ಬಬಲೇಶ್ವರ ಮತಕ್ಷೇತ್ರ ವ್ಯಕ್ತಿಯ ಕನಮಡಿ ಚೆಕ್ ಪೋಸ್ಟ್ ಪರಿಶೀಲಿಸಿದರು.

ಚೆಕ್‌ಪೋಸ್ಟಗಳಲ್ಲಿನ ಅಧಿಕಾರಿ ಮತ್ತು ಸಿಬ್ಬಂದಿಯ ಹಾಜರಾತಿ, ಶಾಮಿಯಾನ, ಕುಡಿಯುವ ನೀರು ಸೇರಿದಂತೆ ಚೆಕ್‌ಪೋಸ್ಟ್‌ನ ವ್ಯವಸ್ಥೆಯ ಬಗ್ಗೆ ಮಾಹಿತಿ ಪಡೆದರು. ಚೆಕ್‌ಪೋಸ್ಟಗಳು ಸರಿಯಾಗಿ ಕಾರ್ಯ ನಿರ್ವಹಿಸಬೇಕು. ಚೆಕ್‌ಪೋಸ್ಟಳಿಗೆ ನಿಯೋಜನೆಗೊಂಡ ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿ ಸರಿಯಾದ ಸಮಯಕ್ಕೆ ಪಾಳಿ ಅನುಸಾರ ಹಾಜರಾಗಿ ಕಾರ್ಯ ನಿರ್ವಹಿಸಬೇಕು. ಪ್ರತಿಯೊಂದು ವಾಹನವನ್ನು ತಪಾಸಣೆಗೆ ಒಳಪಡಿಸಬೇಕು ಎಂದು ಜಿಲ್ಲಾಧಿಕಾರಿಗಳು ಸ್ಥಳದಲ್ಲಿದ್ದ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಉದಯರಶ್ಮಿ
ಪ್ರತಿ ಮನೆ-ಮನದ ಸಂಗಾತಿ

# ನರೇಗಾ ಕಾರ್ಮಿಕರಿಗೆ ಮತದಾನ ಜಾಗೃತಿ ಮೂಡಿಸಿದ ಜಿ.ಪಂ ಸಿಇಓ



ಉದಯರಶ್ಮಿ ನ್ಯೂಸ್

ವಿಜಯಪುರ: ಸಾರ್ವತ್ರಿಕ ಲೋಕಸಭಾ ಚುನಾವಣೆ ಇದೇ ಮೇ 07ರಂದು ಜರುಗಲಿದ್ದು, ಮತದಾನದ ದಿನದಂದು ಕಡ್ಡಾಯವಾಗಿ ಮತಗಟ್ಟೆಗಳಿಗೆ ಬಂದು ಎಲ್ಲರೂ ಮತದಾನ ಮಾಡಿ, ಮತದಾನವನ್ನು ನಿಮಗಾಗಿ, ನಿಮ್ಮ ಭವಿಷ್ಯಕ್ಕಾಗಿ, ನಮ್ಮ ಸಮಾಜಕ್ಕಾಗಿ ಮತ್ತು ನಮ್ಮ ದೇಶಕ್ಕಾಗಿ ಮತದಾನ ಮಾಡಿ ಚುನಾವಣೆ ಪ್ರಕ್ರಿಯೆಯನ್ನು ಯಶಸ್ವಿಗೊಳಿಸಬೇಕೆಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ರಿಶಿ ಆನಂದ ಹೇಳಿದರು.

ಅವರು ವಿಜಯಪುರ ತಾಲೂಕಿನ ನಾಗಠಾಣ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಅನುಷ್ಠಾನಗೊಳ್ಳುತ್ತಿರುವ ಕೆರೆಹೂಳೆತ್ತುವ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ನರೇಗಾ ಕಾರ್ಮಿಕರಿಗೆ ಮತದಾನ ಜಾಗೃತಿ ಮೂಡಿಸಿದರು.

ಪ್ರಸ್ತುತ ಜಿಲ್ಲೆಯಲ್ಲಿ ಬರಗಾಲ ಇರುವುದರಿಂದ ನರೇಗಾ ಯೋಜನೆಯಡಿ ಈ ವರ್ಷದ ಏಪ್ರಿಲ್, ಮೇ ಹಾಗೂ ಜೂನ್ ತಿಂಗಳುಗಳಲ್ಲಿ ಕೂಲಿ ಆಧಾ-ರಿತ ಕಾಮಗಾರಿಗಳನ್ನು ಮಾತ್ರ ಕೈಗೊಳ್ಳಲಾಗುತ್ತಿದೆ. ಆದ್ದರಿಂದ ಎಲ್ಲರೂ ಇನ್ನೂ ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಕೂಲಿ ಕಾರ್ಮಿಕರು ಕೆಲಸಕ್ಕೆ ಬರಬೇಕು. ನರೇಗಾ ಯೋಜನೆಯಡಿ ಪುರುಷರಿಗೆ ಮತ್ತು ಮಹಿಳೆಯರಿಗೆ ಸಮಾನವಾದ ಕೂಲಿ ಒದಗಿಸಲಾಗುತ್ತಿದೆ ಪ್ರತಿದಿನ ಒಬ್ಬರಿಗೆ 349 ರೂಪಾಯಿಗಳನ್ನು ನೀಡಲಾಗುತ್ತಿದೆ ಎಂದರು.

ಜನರಿಗೆ ನರೇಗಾ ಯೋಜನೆಯಡಿ ಉದ್ಯೋಗ ಒದಗಿಸಲು ತಾಲೂಕು ಮತ್ತು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಎಲ್ಲಾ ಅಧಿಕಾರಿಗಳಿಗೆ ಈಗಾಗಲೇ ನಿರ್ದೇಶನ ನೀಡಲಾಗಿರುತ್ತದೆ. ಆದ್ದರಿಂದ ತಾವೆಲ್ಲರೂ ಇನ್ನೂ ಹೆಚ್ಚು ಹೆಚ್ಚು ಉದ್ಯೋಗ ಮಾಡಿ ಯೋಜನೆಯ ಸೌಲಭ್ಯ ಪಡೆದುಕೊಳ್ಳಬೇಕು ಮತ್ತು ಅಭಿವೃದ್ಧಿ ಹೊಂದಬೇಕು. ಕಾಮಗಾರಿ ಸ್ಥಳದಲ್ಲಿ ತಮ್ಮೆಲ್ಲರಿಗೂ ಯಾವುದೇ ತೊಂದರೆಯಾಗದಂತೆ ಕ್ರಮವಹಿಸಲಾಗುತ್ತದೆ ಹಾಗೂ ಮೂಲಭೂತ ಸೌಕರ್ಯಗಳಾದ ನೆರಳಿನ ವ್ಯವಸ್ಥೆ, ಕುಡಿಯುವ ನೀರು ಮತ್ತು ಉಚಿತ ಆರೋಗ್ಯ ತಪಾಸಣೆ ವ್ಯವಸ್ಥೆಗಳನ್ನು ಮಾಡಲಾಗಿದೆ. ಪ್ರಸ್ತುತ ದಿನಗಳಲ್ಲಿ ಬಿಸಿಲಿನ ತಾಪಮಾನ ಅತೀ ಹೆಚ್ಚು ಇರುವುದ-ರಿಂದ ತಮ್ಮೆಲ್ಲರಿಗೂ ಆರೋಗ್ಯದಲ್ಲಿ ಏರುಪೇರು ಉಂಟಾಗದಂತೆ ಎಚ್ಚರವಹಿಸಿ, ಕಾಮಗಾರಿ ಸ್ಥಳದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ.

ಪ್ರತಿಯೊಬ್ಬರೂ ಕಡ್ಡಾಯವಾಗಿ ನಿಮ್ಮ ನಿಮ್ಮ ಆರೋಗ್ಯವನ್ನು ತಪಾಸಣೆ ಮಾಡಿಸಿಕೊಳ್ಳಿ ಆರೋಗ್ಯದಲ್ಲಿ ಸಮಸ್ಯೆಗಳಿದ್ದರೆ ಹೆಚ್ಚಿನ ಚಿಕಿತ್ಸೆಯ ಅವಶ್ಯವಿದ್ದಲ್ಲಿ ತಾಲೂಕು ಮತ್ತು ಜಿಲ್ಲಾ ಆಸ್ಪತ್ರೆಗಳಿಗೆ ಶಿಫಾರಸ್ಸು ಮಾಡಲಾಗುವುದು ಆದ್ದರಿಂದ ನೀವೆಲ್ಲರೂ ಇದರ ಸದುಪಯೋಗವನ್ನು ಪಡೆದು ಆರೋಗ್ಯವಂತರಾಗಿರಬೇಕು ಎಂದು ಹೇಳಿದರು.

ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಕೆಲಸ ನಿರ್ವಹಿಸುವ ಕೂಲಿ ಕಾರ್ಮಿಕರ ಮೂರು ವರ್ಷದ ಒಳಗಿನ ಮಕ್ಕಳನ್ನು ಆರೈಕೆ ಮಾಡಲು ಜಿಲ್ಲೆಯಲ್ಲಿ 163 ಕೂಸಿನ ಮನೆಗಳನ್ನು ಪ್ರಾರಂಭ ಮಾಡಲಾಗಿದೆ. ಅದೇ ರೀತಿ ನಾಗಠಾಣ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿಯೂ ಸಹ ಕೂಸಿನ ಮನೆಯನ್ನು ಪ್ರಾರಂಭಿಸಲಾಗಿದೆ. ಎಲ್ಲರೂ ನಿಮ್ಮ ಮೂರು ವರ್ಷದ ಒಳಗಿನ ಮಕ್ಕಳನ್ನು ಕೂಸಿನ ಮನೆಯಲ್ಲಿ ಬಿಟ್ಟು ಕೆಲಸಕ್ಕೆ ಬರಬಹುದು. ಸದರಿ ಕೂಸಿನ ಮನೆಯಲ್ಲಿ ನಿಮ್ಮ ಮಕ್ಕಳನ್ನು ನೋಡಿಕೊಳ್ಳಲು ಮತ್ತು ಆರೈಕೆ ಮಾಡಲು ಪ್ರತ್ಯೇಕವಾಗಿ ಮಕ್ಕಳ ಆರೈಕೆದಾರರನ್ನು ಆಯ್ಕೆ ಮಾಡಲಾಗಿದೆ. ಅಲ್ಲಿ ಮಕ್ಕಳ ಆರೈಕೆದಾರರು ಮಕ್ಕಳಿಗೆ ಆಟ-ಪಾಠ, ಪಾಲನೆ-ಪೋಷಣೆ, ವೈಯಕ್ತಿಕ ಸ್ವಚ್ಛತೆ ಕಡೆಗೆ ವಿಶೇಷಗಮನ ನೀಡುತ್ತಾರೆ. ನೀವು ನಿರ್ಭೀತಿಯಿಂದ ನಿಮ್ಮ ಮಕ್ಕಳನ್ನು ಕೂಸಿನ ಮನೆಗಳಲ್ಲಿ ಬಿಟ್ಟು ನೆಮ್ಮದಿಯಿಂದ ಕೆಲಸ ಮಾಡಬಹುದು ಎಂದು ತಿಳಿಸಿದರು.

ನಂತರ ಜಿಲ್ಲಾ ಸ್ವೀಪ್ ಸಮಿತಿಯ ರಾಯಭಾರಿ ಸಾಕ್ಷಿ ಹಿರೇಮಠ ರವರು ಮತದಾನ ಜಾಗೃತಿ ಗೀತೆಯನ್ನು ಹಾಡಿದರು. ಜಿ.ಪಂ ಎನ್.ಆರ್.ಎಲ್.ಎಮ್ ವ್ಯವಸ್ಥಾಪಕರಾದ ಅಮೋಘಸಿದ್ದ ಗೌಳಿಯವರು ಮತದಾರರ ಪ್ರತಿಜ್ಞಾ ವಿಧಿ ಬೋಧಿಸಿದರು. ಈ ಸಂದರ್ಭದಲ್ಲಿ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಕೆರೆ ಹೂಳೆತ್ತುವ ಕಾಮಗಾರಿ ಸ್ಥಳದಲ್ಲಿ 282 ಮಹಿಳೆಯರು, 133 ಪುರುಷರು, ಒಟ್ಟು 415 ಕೂಲಿ ಕಾರ್ಮಿಕರು ಸ್ಥಳದಲ್ಲಿದ್ದರು. ಇದೇ ವೇಳೆ ಜಿಲ್ಲಾ ಪಂಚಾಯತಿಯ ಉಪಕಾರ್ಯದರ್ಶಿಗಳಾದ ಬಿ. ಎಸ್. ಮೂಗನೂರಮಠ, ಜಿಲ್ಲಾ ಸ್ವೀಪ್ ಸಮಿತಿಯ ನೋಡೆಲ್ ಅಧಿಕಾ-ರಿಗಳಾದ ಸಿ. ಆರ್. ಮುಂಡರಗಿ, ತಾಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾ-ರಿಗಳಾದ ಕೆ. ಹೊಂಗಯ್ಯ, ತಾ.ಪಂ. ಸಹಾಯಕ ನಿರ್ದೇಶಕರು(ಗ್ರಾ.ಉ) ಕಾಸಿಮಸಾಬ ಮಸಳಿ, ಜಿಲ್ಲಾ ಸ್ವೀಪ್ ಸಮಿತಿಯ ರಾಯಭಾರಿ ಸಹನಾ ಕುಡಿಗನೂರ, ನಾಗಠಾಣ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಬಿ. ಆರ್. ರಾಠೋಡ, ತಾಂತ್ರಿಕ ಸಂಯೋಜಕರು, ಗ್ರಾಮಸ್ಥರು ಉಪಸ್ಥಿತರಿದ್ದರು.

# ಅಗ್ನಿ ಅವಘಡ ಮುಂಜಾಗೃತಾ ಅರಿವು ಕಾರ್ಯಕ್ರಮ

ಉದಯರಶ್ಮಿ ನ್ಯೂಸ್

ಕೊಲ್ಹಾರ: ಆಕಸ್ಮಿಕವಾಗಿ ಅಗ್ನಿ ಅವಘಡವಾದಾಗ ಭಯಪಡದೆ ನೀರು ಗಿಡದ ತಪ್ಪಲು, ಮಣ್ಣು ಬಳಸಿ ಬೆಂಕಿ ನಂದಿಸಿ ಮುಂದಾಗುವ ಅನಾಹುತ ತಪ್ಪಿಸಬಹುದು ಎಂದು ಸಿ.ಆಯ್.ಎಸ್.ಎಫ್‌ನ ಅಗ್ನಿಶಾಮಕ ದಳದ ಫೈರ್ ಹೆಡ್‌ಕಾನ್ಸೆಬಲ್ ಬಿನ್ನಾಳ ಈಶ್ವರ ತಿಳಿಸಿದರು.




ಶ್ರೀ ಗುರು ಸಂಗನಬಸವೇಶ್ವರ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕ ಜಗದೀಶ ಸಾಲಳ್ಳಿ ವಿನಂತಿ ಮೇರೆಗೆ ಅಗ್ನಿ ಶಾಮಕ ಸಪ್ತಾಹದ ಅಂಗವಾಗಿ ಅಗ್ನಿ ಸುರಕ್ಷತೆ ಹಾಗೂ ಅಗ್ನಿ ಅವಘಡ ಮುಂಜಾಗೃತಾ ಅರಿವು ಕಾರ್ಯಕ್ರಮ ಉದ್ದೇಶಿಸಿ ಮಾಹಿತಿ ನೀಡಿದರು.

ಬೇಸಿಗೆ ರಜೆಯಲ್ಲಿರುವ ಮಕ್ಕಳಿಗೆ ಹಾಗೂ ಗ್ರಾಮಸ್ಥರಿಗೆ ಅಣುಕು ಪ್ರದರ್ಶನ ಹಾಗೂ ಬೆಂಕಿ ನಂದಿಸುವ ಸಲಕರಣೆ ಬಳಸುವ ವಿಧಾನ,ಮನೆಯಲ್ಲಿ ಎಲ್ ಪಿ ಜಿ ಗ್ಯಾಸ್ ಸೋರಿಕೆ ಸಂಧರ್ಭದಲ್ಲಿ ನಾವು ಕೈಗೊಳ್ಳುವ ಮುಂಜಾಗ್ರತಾ ಕ್ರಮದ ಕುರಿತು ವಿವರಿಸಿದರು.

ಶಿಕ್ಷಕ ಜಗದೀಶ ಸಾಲಳ್ಳಿ ಮಾತನಾಡಿ ಅಗ್ನಿಶಾಮಕ ದಳದ ಸಿಬ್ಬಂದಿ ಆಕಸ್ಮಿಕವಾಗಿ ಸಂಭವಿಸುವ ಅಗ್ನಿ ಅನಾಹುತ ತಪ್ಪಿಸಲು ಜೀವದ ಹಂಗು ತೊರೆದು ನಮ್ಮೆಲ್ಲರ ರಕ್ಷಣಾ ಕಾರ್ಯದಲ್ಲಿ ತೊಡಗಿರುವ ಅವರ ಕಾರ್ಯ ಶ್ಲಾಘನೀಯ ಜೊತೆಗೆ ಮಕ್ಕಳು ಹಾಗೂ ಜನರಲ್ಲಿ ಅರಿವು ಮೂಡಿಸುವುದರಿಂದ ಮುಂದಾಗುವ ಹೆಚ್ಚಿನ ಅನಾಹುತ ತಪ್ಪಿಸಬಹುದು ಈ ಜಾಗೃತಿ ಮಕ್ಕಳಿಗೆ ಅಗತ್ಯವಾಗಿತ್ತು ಎಂದರು.

ಅಗ್ನಿಶಾಮಕ ದಳದ ಕಾನ್ಸೆಬಲ್ ಆಯ್ ಪಿ ಮುತ್ತನ್ನವರ,ಸಿ ಎ ಗೂಗಿಹಾಳ, ಚಾಲೆಂಜ ಕೋಚಿಂಗ್ ಕ್ಲಾಸಿಸ್ ನ ಮಲ್ಲಿಕಾರ್ಜುನ ಪಾಟೀಲ ಮಕ್ಕಳು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು ಈ ಸಂದರ್ಭದಲ್ಲಿ ಅಗ್ನಿಶಾಮಕ ದಳದ ಸಿಬ್ಬಂದಿ ಗೌರವಿಸಿ ಸನ್ಮಾನಿಸಲಾಯಿತು.

# ಸುಳ್ಳು ಭರವಸೆಗಳಿಂದ ಜನರ ದಾರಿ ತಪ್ಪಿಸುತ್ತಿರುವ ಕಾಂಗ್ರೆಸ್

ಉದಯರಶ್ಮಿ ನ್ಯೂಸ್

ಸಿಂದಗಿ: ರಾಜ್ಯ ಕಾಂಗ್ರೆಸ್ ಸರಕಾರ ಕೇವಲ ಸುಳ್ಳು ಭರವಸೆಗಳನ್ನು ನೀಡುತ್ತಾ ಜನರನ್ನು ದಾರಿ ತಪ್ಪಿಸುತ್ತಿದೆ. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಯುವ ನಿಧಿಯ ಭರವಸೆಯನ್ನು ನೀಡಿ ಅಧಿಕಾರದ ಚುಕ್ಕಾಣಿ ಹಿಡಿದುಕೊಂಡ ನಂತರ ಭಾರಿ ಪ್ರಮಾಣದಲ್ಲಿ ಮೋಸ ಮಾಡಿದೆ ಎಂದು ಸಿಂದಗಿ ಬಿಜೆಪಿ ಯುವ ಮೋರ್ಚಾ ತಾಲೂಕಾಧ್ಯಕ್ಷ ಅಶೋಕ ನಾರಾಯಣಪೂರ ಆರೋಪಿಸಿದರು.

ಗುರುವಾರ ಪತ್ರಿಕಾ ಹೇಳಿಕೆ ನೀಡಿದ ಅವರು, ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳ ಸಲುವಾಗಿ ವಿದ್ಯಾರ್ಥಿಗಳ ವಿದ್ಯಾಸಿರಿ, ವಿದ್ಯಾನಿಧಿ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿ ವೇತನಗಳನ್ನು ಮೊಟಕುಗೊಳಿಸಿ ವಿದ್ಯಾರ್ಥಿವೇತನದ ಹಣವನ್ನು ಸಹ ಗ್ಯಾರಂಟಿ ಯೋಜನೆಗೆ ಬಳಸಲಾಗುತ್ತಿರುವುದು ಖಂಡನೀಯ. ಬಡ ವಿದ್ಯಾರ್ಥಿಗಳಿಗೆ ಸಾರಿಗೆ ವ್ಯವಸ್ಥೆ ಸೇರಿದಂತೆ ಹಲವಾರು ಸಮಸ್ಯೆಗಳಿಗೆ ಒಳಗಾಗಿದ್ದಾರೆ. ರಾಜ್ಯ ಸರ್ಕಾರದ ಈ ಒಂದು ಗ್ಯಾರಂಟಿ ಯೋಜನೆ, ಎಲ್ಲಾ ಯುವಕರಿಗೂ ತೊಂದರೆ ಉಂಟುಮಾಡಿದೆ.

ಈ ಉಚಿತ ಯೋಜನೆಗಳಿಂದ ರಾಜ್ಯದ ಬೊಕ್ಕಸ ಖಾಲಿಯಾಗಿ ಮುಂದೊಂದು ದಿನ ರಾಜ್ಯ ದಿವಾಳಿಯಾಗುವುದು ಖಚಿತ. ಇಂತಹ ಉಚಿತ ಯೋಜನೆಗಳಿಂದ ರಾಜ್ಯದ ಸರ್ವಾಂಗೀಣ ಅಭಿವೃದ್ಧಿ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹಿಂದಿನ ಬಿಜೆಪಿ ಸರ್ಕಾರ ರೈತರ ಮಕ್ಕಳಿಗೆ ಕೊಡುವಂತಹ "ಮುಖ್ಯಮಂತ್ರಿ ರೈತ ವಿದ್ಯಾ ನಿಧಿ ವಿದ್ಯಾರ್ಥಿವೇತನ ಯೋಜನೆಯನ್ನು ರದ್ದು ಮಾಡಿ ವಿದ್ಯಾರ್ಥಿಗಳಿಗೆ ಮೋಸ ಮಾಡಿದ ಕಾಂಗ್ರೆಸ್ ಸರಕಾರ. ಮತ್ತೇ ಎಲ್ಲವೂ ನಾವೇ ಕೊಡುತ್ತಿದ್ದೇವೆ ಎಂದು ಹೇಳುವುದು ಎಷ್ಟು ಸರಿ ಎಂದು ಪ್ರಶ್ನಿಸಿದ್ದಾರೆ.



ಇಂತಹ ಸುಳ್ಳು ಭರವಸೆಗಳನ್ನು ಇಟ್ಟುಕೊಂಡು ಲೋಕಸಭಾ ಚುನಾವಣೆಗೆ ಕಾಂಗ್ರೆಸ್ ಹೊರಟಿದೆ. ರಾಜ್ಯದ ಬೊಕ್ಕಸ ಖಾಲಿ ಮಾಡುವ ಕಾರ್ಯದೊಂದಿಗೆ ರಾಷ್ಟ್ರದ ಬೊಕ್ಕಸವೂ ಸಹ ಖಾಲಿ ಮಾಡಿ ನಮ್ಮ ಭಾರತ ದೇಶವನ್ನು ದಿವಾಳಿ ರಾಷ್ಟ್ರ ಮಾಡಿ ನರಿ ಬುದ್ಧಿಯ ಕಾರ್ಯವೈಖರಿಗಳೊಂದಿಗೆ ದೇಶದ ಜನರನ್ನು ಬಲಿಪಶು ಮಾಡಲು ಮುಂದಾಗಿದೆ ಭ್ರಷ್ಟ ಕಾಂಗ್ರೆಸ್ ಸರ್ಕಾರ. ಭಾರತೀಯ ಜನತಾ ಪಾರ್ಟಿ ಯುವ ಮೋರ್ಚ ಸಿಂದಗಿ ಮಂಡಲ ಖಂಡಿಸುತ್ತದೆ ಎಂದು ಹೇಳಿದ್ದಾರೆ.

# ರೈತರ ಹಿತದೃಷ್ಟಿಯಿಂದ ಐಪಿ ಸೆಟ್ ಲೈನ್ ಪ್ರಾರಂಭ :ನಾಯಕ



ಉದಯರಶ್ಮಿ ನ್ಯೂಸ್

ಸಿಂದಗಿ: ಗ್ರಾಮೀಣ ಭಾಗದ ರೈತರ ಹಿತದೃಷ್ಟಿಯಿಂದ ಈ ಐಪಿ ಸೆಟ್ ಲೈನ್ ಪ್ರಾರಂಭ ಮಾಡಲಾಗಿದೆ ಎಂದು ಸಹಾಯಕ ಕಾರ್ಯನಿರ್ವಹಕ ಅಭಿಯಂತರ ಚಂದ್ರಕಾಂತ ನಾಯಕ ಹೇಳಿದರು.

ಪಟ್ಟಣದ ಸಿಂದಗಿ ಉಪವಿಭಾಗ 110ಕೆವಿ ಕೇಂದ್ರದಲ್ಲಿ ನೂತನ ಬೆನಕೊಟಗಿ ಐಪಿ ಲೈನ್‌ಗೆ ಚಾಲನೆ ನೀಡಿ ಮಾತನಾಡಿದ ಅವರು, ಒಂದೇ ಪಾಳಿಯಲ್ಲಿ ಎರಡು ಐಪಿ ಲೈನ್ ನೀಡುವ ಪರಿಸ್ಥಿತಿ ಇದ್ದುದ್ದರಿಂದ ನಮ್ಮ ಲೈನ್‌ಮ್ಯಾನ್‌ಗಳಿಗೆ ದಿನನಿತ್ಯ ಕಷ್ಟಪಡುತ್ತಿದ್ದರು. ಹಾಗಾಗಿ ಅತೀ ಹೆಚ್ಚು ಹೊರೆ ಇರುವ ಲೈನ್‌ಗಳನ್ನು ವಿಂಗಡಣೆ ಮಾಡಿ ಸಮರ್ಪಕ ವಿದ್ಯುತ್ ನೀಡುವ ನಿಟ್ಟಿನಲ್ಲಿ ಹೊಸದಾಗಿ ಲೈನ್ ಪ್ರಾರಂಭ ಮಾಡಿದ್ದೇವೆ.

ಈ ವೇಳೆ ನೋಡಲ್ ಅಧಿಕಾರಿ ಪಿ.ಎಮ್.ಬಡಿಗೇರ, ಸಹಾಯಕ ಇಂಜಿನಿಯರ್ ಡಿ.ಎಂ. ಮೋಲಿಮನಿ, ಎಸ್.ಎನ್.ಗೌಡರ್, ಆಲಮೇಲ2 ಶಾಖಾಧಿಕಾರಿ ಹೆಚ್.ಎಮ್.ಮುಲ್ಲಾ, ಸಿಂದಗಿ ಗ್ರಾಮೀಣ ಶಾಖೆಯ ಮೇಲ್ವಿಚಾರಕ ಜಿ.ಬಿ.ಪಾಟೀಲ್, ಹೈದರ್, ಎಮ್.ಡಿ.ಪೂಜಾರಿ, ರಾಜು ಸೇರಿದಂತೆ, ಇತರ ವಿಭಾಗದ ಅಧಿಕಾರಿಗಳು, ಲೈನ್‌ಮ್ಯಾನ್‌ಗಳು ಇದ್ದರು.

# ಅನುಸೂಯಾ ವಡ್ಡರ ಗೆ ಕಸಾಪ ಸನ್ಮಾನ

ಉದಯರಶ್ಮಿ ನ್ಯೂಸ್

ವಿಜಯಪುರ: ಕರ್ನಾಟಕ ಬಯಲಾಟ ಅಕಾಡೆಮಿಗೆ ಬಬಲೇಶ್ವರ ಪಟ್ಟಣದ ಅನಸೂಯಾ ವಡ್ಡರ್ ಇವರಿಗೆ ವಿಜಯಪುರ ಹಾಗೂ ಬಾಗಲಕೋಟೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಬಬಲೇಶ್ವರ ಅವರ ಮನೆಯಲ್ಲಿ ಗೌರವ ಸನ್ಮಾನ ಮಾಡಲಾಯಿತು

ವಿಜಯಪುರ ಜಿಲ್ಲಾ ಕಸಾಪ ಅಧ್ಯಕ್ಷ ಹಾಸಿಂಪೀರ ವಾಲಿಕಾರ ಮಾತನಾಡಿ, ಕಸಾಪ ಎಲೆಮರೆಕಾಯಿಯಂತಿರುವ ಕಲಾವಿದರನ್ನು ಗುರುತಿಸುವ ಹಾಗೂ ಗೌರವಿಸುವ ಕಾರ್ಯ ಮಾಡುತ್ತಿರುವುದು ಹೆಮ್ಮೆಯ ವಿಷಯ ಎಂದು ಹೇಳಿದರು.

ಬಬಲೇಶ್ವರ ಪಟ್ಟಣದ ನಿವಾಸಿಗಳಾದ ಕರ್ನಾಟಕ



ಬಯಲಾಟ ಅಕಾಡೆಮಿಯ ಸದಸ್ಯೆಯಾಗಿ ನೇಮಕಗೊಂಡ ಅನುಸೂಯಾ ವಡ್ಡರ್ ಮನೆಯಲ್ಲಿ ಸನ್ಮಾನಿಸಿ ಮಾತನಾಡಿ, ಶ್ರೀ ಕೃಷ್ಣ ಪಾರಿಜಾತದಲ್ಲಿ ಅನೇಕ ಬಯಲಾಟ ಪಾತ್ರ ನಿರ್ವಹಿಸಿ ಅನೇಕ ಪ್ರಶಸ್ತಿಗಳನ್ನು ಪಡೆದುಕೊಂಡು ನಾಡಿಗೆ ಗೌರವ ತಂದಿದ್ದಾರೆ ಎಂದರು.

ಬಾಗಲಕೋಟ ಜಿಲ್ಲಾ ಕಸಾಪ ಅಧ್ಯಕ್ಷ ಶಿವಾನಂದ ಶೆಲ್ಲಿಕೇರಿ ಮಾತನಾಡಿ, ಕಲಾವಿದರನ್ನು ಪ್ರೋತ್ಸಾಹಿಸುವುದು ನಮ್ಮೆಲ್ಲರ ಕರ್ತವ್ಯ, ಜಾನಪದ ಕಲೆಗಳು ನಮ್ಮ ನಾಡಿನ ಸಾಂಸ್ಕೃತಿಯ ಪ್ರತೀಕ, ಕಲಾವಿದರನ್ನು ಸರ್ಕಾರ ವಿಶೇಷ ಅನುದಾನ ನೀಡಿ ಪ್ರೋತ್ಸಾಹಿಸಬೇಕು ಎಂದರು

ಸನ್ಮಾನ ಸ್ವೀಕರಿಸಿ ಮಾತನಾಡಿದ ಅನುಸೂಯಾ ವಡ್ಡರ್ ಮಾತನಾಡಿ, ನಾನು ಬಾಲ್ಯದಿಂದ ಪ್ರತಿಭಾವಂತ ಕಲಾವಿದೆಯಾಗಿ ಸೇವೆ ಮಾಡಿದ್ದೇನೆ ಇದು ನನ್ನ ಹವ್ಯಾಸ ಎಂದರು.

ನಿಂಗಪ್ಪ ಬಿರಾದಾರ, ರಾಜು ಅಂಗಡಿ, ಹಸನ್ ಸೊನ್ನಾದ, ಮಹೆಬೂಬ್ ಮುಜಾವರ ಮುಂತಾದವರು ಉಪಸ್ಥಿತರಿದ್ದರು.

# ಕವನಗಳ ಆಹ್ವಾನ

ಉದಯರಶ್ಮಿ ನ್ಯೂಸ್

ಸಿಂದಗಿ: ತಾಲೂಕಿನ ಬೋರಗಿ ಗ್ರಾಮದ ನಬಿರೋಶನ್ ಪ್ರಕಾಶನ ಸಂಸ್ಥೆಯ ವತಿಯಿಂದ ಮೇ ತಿಂಗಳಲ್ಲಿ ಬಸವ ಜಯಂತಿ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಜಯಂತೋತ್ಸವ ಪ್ರಯುಕ್ತ ಉಪನ್ಯಾಸ, ಬಸವ ಬಂಧು ಮತ್ತು ಭೀಮ್ ಬಂಧು ಪ್ರಶಸ್ತಿ ಪ್ರದಾನ ಹಾಗೂ ಕವಿಗೋಷ್ಠಿ ಸಮಾರಂಭವನ್ನು ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ. ಕಾರಣ ಆಸಕ್ತ ಕವಿಗಳು ಕವಿಗೋಷ್ಠಿಯಲ್ಲಿ ಭಾಗವಹಿಸಲು ಬಸವಣ್ಣನವರ ಹಾಗೂ ಡಾ.ಬಿ.ಆರ್ ಅಂಬೇಡ್ಕರ್ ರವರ ಕುರಿತಾದ ಎರಡು ಕವನಗಳನ್ನು ಈ ಕೆಳಗಿನ ದೂರವಾಣಿಗೆ 9742849663 ವ್ಯಾಟ್ಸಪ್ ಮಾಡಬೇಕು ಎಂದು ಪತ್ರಿಕಾ ಪ್ರಕಟಣೆಯಲ್ಲಿ ನಬಿರೋಷನ್ ಸಂಸ್ಥೆಯ ಸಂಚಾಲಕರು ತಿಳಿಸಿದ್ದಾರೆ.

# ಪ್ರೀತಿ ಎಂದರೆ...

## ಭಾವರಶ್ಮಿ



– ಅಶೋಕ್ ಸುತಗಟ್ಟಿ

("ನಮ್ಮ ಕಥಾ ಅರಮನೆ" ಬರಹಗಾರರು)

ಉದಯರಶ್ಮಿ ದಿನಪತ್ರಿಕೆ

ಪತಿರಾಯರು ಅಡಿಗೆ ಮನೆಯೊಳಗೆ ಬಂದು ತನ್ನ ಹಿಂದೆ ನಿಂತಾಗ ಸುಬ್ಬಜ್ಜಿಗೆ ತುಸು ಕೋಪ ಬಂದಿತ್ತು. "ಅಲ್ಲಿ ಹೊರಗೆ ಆ ಹೆಣ್ಮಗಳನ್ನ ಮಾತಾಡ್ಸೋದು ಬಿಟ್ಟು ಇಲ್ಲಿ ಬಂದಿದೀರಲ್ಲಾ. ಆಕೆ ಜೊತೆ ಸ್ವಲ್ಪ ಮಾತಾಡ್ತಾ ಕೂತಿರ್ಬಾರ್ದಿತ್ತೇ....?"

"ಸಾಕೂ ಅದೊಂದೇ ಸೇಬು ಹೆಚ್ಚಿ ಕೊಡು ಸಾಕು. ಅರ್ಧ ಕಿಲೋಗೆ ಮೂರೇ ಬಂದಿವೆ. ಇನ್ನೆರಡು ನಮಗೇ ಇರ್ಲಿ" ಕಿಟ್ಟಪ್ಪಜ್ಜ ಹೆಂಡತಿಗೆ ಗುಸು ಗುಸು ಎಂದು ಕಿವಿಮಾತು ಹೇಳಿದರು.

"ಅದೇನು ಜಿಪುಣತನವೋ ನೀವೇನು ಈ ಬೊಚ್ಚುಬಾಯಲ್ಲಿ ಸೇಬು ತಿನ್ಬೇಕಾಗಿದ್ಯಾ ?"

"ಅಲ್ವೇ ನನಗೆ ಹಲ್ಲಿಲ್ಲದಿದ್ರೇನಾಯ್ತು ನಿನಗಿದ್ಯಲ್ಲಾ ಪಾಪ! ನಿನಗೆ ಸೇಬುಹಣ್ಣು ಇಷ್ಟ. ನೀನು ತಿನ್ಲೀಂತಾನೇ ನಾನು ತಂದಿದ್ದು."

ಸುಬ್ಬಜ್ಜಿ ಮೌನವಾಗಿ ಗಂಡನೆಡೆಗೊಂದು ಚೂಪುದೃಷ್ಟಿ ಬೀರಿ ಹೊರನಡೆದರು.

"ಅಜ್ಜೀ ನಿಮಗೆ ತೊಂದ್ರೆ ಕೊಟ್ಟಹಾಗಾಯ್ತು." ಬಂದ ಅತಿಥಿ ಹೇಳಿದಳು.

"ನೀನೂ ಅಪರೂಪಕ್ಕೆ ಬಂದಿದಿಯಾ. ನನ್ನ ಸೊಸೆ ಇದ್ದಿದ್ರೆ ಇನ್ನೂ ಚೆನ್ನಾಗೇ ಉಪಚಾರ ಮಾಡೋಳು. ಈಗ ನನ್ ಕೈಲೂ ಆಗಲ್ಲಮ್ಮಾ. ನಿನ್ನೆ ತಾನೇ ನಮ್ಮಗ, ಸೊಸೆ ಇಬ್ರೂ ಮಗೂ, ಬಾಣಂತೀನ ಬಿಟ್ಟು ಬರೋಕೆ ಹೋಗಿದಾರೆ. ಇನ್ನೇನು ನಾಳೆ ಸಂಜೆ ಒಳಗೇ ಬರ್ತಾರೆ. ನಾವಿಬ್ರೇ ವಯಸ್ಸಾದೋ-ರಿರ್ತೀವಿ ಅಂತ ಅವರಿಗೂ ಭಯ. ಹಾಗೆಲ್ಲಾ ತುಂಬಾ ದಿನ ಬಿಟ್ಟು ಹೋಗಲ್ಲಾ."

"ನೀವು ಪುಣ್ಯವಂತರು ಬಿಡೀ. ಮರೀ ಮೊಮ್ಮಗೂನ ನೋಡಿದ ಹಾಗಾಯ್ತಲ್ವೇ ಅಜ್ಜೀ"

ಆ ಮಾತು ಕೇಳಿ ಕಿಟ್ಟಪ್ಪಜ್ಜ, ಸುಬ್ಬಜ್ಜಿ ಮುಖದಲ್ಲಿ ಪೂರ್ಣಚಂದ್ರ ಮಿನುಗಿದ್ದ. ಬಂದಾಕೆ ಹಣ್ಣಿನ ಒಂದೆರಡು ಹೋಳುಗಳನ್ನು ತಿನ್ನುತ್ತಿರುವಾಗಲೇ "ನೀನೂ ತಿನ್ನೂ " ಮೃದುವಾಗಿ ಹೆಂಡತಿಯ ಭುಜ ತಟ್ಟಿ ಕಿಟ್ಟಪ್ಪ ಹೇಳಿದರು.


"ನೀವೂ ತೊಗೊಳೀ ಅಜ್ಜೀ" ಬಂದಾಕೆಯೂ ಪ್ಲೇಟ್ ಮುಂದೆ ತಳ್ಳಿದಳು.

" ನೀನು ತೊಗೋಮ್ಮಾ ಕಾಫೀ ಟೀ ಏನೂ ಬೇಡಾ ಅಂದ್ಯಲ್ಲಾಂತ ನಾನು ಹಣ್ಣು ಹೆಚ್ಚಿದೆ."

"ಇರಲಿ ಅವರ ಜೊತೆ ನೀನೂ ಕಂಪನಿ ಕೊಡಲ್ಲಾ!" ಕಿಟ್ಟಪ್ಪಜ್ಜ ಒತ್ತಾಯಿಸಿದಾಗ ಇಲ್ಲವೆನ್ನಲಾರದೇ ಸುಬ್ಬಜ್ಜಿ ಗಂಡನತ್ತ ದುರುಗುಟ್ಟಿ ನೋಡುತ್ತಾ ಒಂದು ಹೋಳು ಬಾಯಿಗೆ ಹಾಕಿದರು.

ಮಾತು ಮುಗಿಸಿದ ನಂತರ ಬಂದಿದ್ದ ಹೆಣ್ಣುಮಗಳು ಹೊರಟು ನಿಂತಾಗ ಕುಂಕುಮ ಕೊಡುತ್ತೇನೆಂದು ಸುಬ್ಬಜ್ಜಿ ನಿಧಾನವಾಗಿ ಒಳಗೆ ಹೋದಾಗ ಕಳ್ಳ ಬೆಕ್ಕಿನಂತೆ ಕಿಟ್ಟಪ್ಪಜ್ಜನೂ ಹೆಂಡತಿಯನ್ನು ಹಿಂಬಾಲಿಸಿ "ತೆಂಗಿನಕಾಯಿ ಇದೆಯಾ...? ಹಾಂ ಇಲ್ಲಿದೆ ತೊಗೋ ಇದನ್ನೇ ಕೊಡು. ಸೇಬುಹಣ್ಣು ಕೊಡಬೇಡ." ಅಂದರು.

ಸುಬ್ಬಜ್ಜಿ ಏನೂ ಮಾತನಾಡದೇ ತೆಂಗಿನಕಾಯಿ, ಖಣ, ಎಲೆ, ಅಡಿಕೆ ಜೋಡಿಸುವಾಗ "ಮಲ್ಲಿಗೆ ಹೂ ನಿನಗೂ ಸ್ವಲ್ಪ ಇಟ್ಟುಕೋ. ಪುನಃ ಗಂಡ ಹೇಳಿದಾಗ ಥೋ.. ನೀವು ಹೊರಗೆ ಹೋಗೀಪ್ಪಾ" ಸುಬ್ಬಜ್ಜಿ ಅಸಮಾಧಾನ ತೋರುತ್ತಾ ಹೊರಗೆ ಸಾಗಹಾಕಿದರು.



ಸಂಜೆಯ ಹೊತ್ತಿಗೆ ಸುಬ್ಬಜ್ಜಿ ಹೆರಳು ಬಾಚಿ ಕಟ್ಟುವಾಗ "ಬೆಳಿಗ್ಗೆ ನಾನು ನಿನಗೇ ಅಂತನೇ ಮಲ್ಲಿಗೆ ಹೂ ತಂದಿದ್ದೆ. ಒಳಗಿಟ್ಕೊಂಡಿದೀಯಲ್ವಾ ? ಮುಡ್ಕೋ " ಎಂದರು.

"ಅದ್ಯಾಕೆ ಹಾಗಾಡ್ತೀರೀ? ಬೆಳಿಗ್ಗೆ ಪಾಪ ಆಕೆ ನಮ್ಮ ಸೊಸೆ ಬಳಗಾಂತ ಹೇಳ್ಕೊಂಡು ಬಂದ್ರೆ ಆ ಹಣ್ಣು ಹೆಚ್ಚಿ ಕೊಡುವಾಗ್ಲೂ ಹಾಗೇ ಮಾಡಿದ್ರೀ..."

"ನಾನು ನಿನಗೇಂತಾನೇ ಹಣ್ಣು, ಹೂವು ತಂದೇ ಕಣೆ ನನ್ನ ಕೈಲಾಗದೇ ಇದ್ರೂ ಈ ವಯಸ್ಸಲ್ಲಿ ಅಷ್ಟು ಪ್ರೀತಿಯಿಂದ ನಾನು ತಂದುಕೊಟ್ಟರೆ ಹೀಗೆ ಸಿಡುಕ್ತೀಯಲ್ಲಾ!"

"ಮೊದ್ಲೆಲ್ಲಾ ನನಗಿಷ್ಟವಾಗಿದ್ದೆಲ್ಲಾ ನೀವೇ ತಂದ್ಕೊಡ್ತಿದ್ರೀ ತಾನೇ. ನಾನೂ ತೊಗೋತಿದ್ದೇ. ಈಗ ನಮ್ಮ ಕಾಲ ಮುಗೀತು ರೀ ರಾಮಾ ಕೃಷ್ಣಾ ಅಂತ ಮಕ್ಕಳ ಸುಖ ನೋಡಿ ಸಂತೋಷ ಪಡಬೇಕು ಅಷ್ಟೇ. ಈಗ ನೀವು ಆ ಥರಾ ಎಲ್ಲಾ ನನಗೆ ಅಂತ ತರಬಾರ್ದೂ"

"ಅಯ್ಯೋ ! ತಪ್ಪೇನೂ? ಆಗೆಲ್ಲ ತಂದುಕೊಟ್ಟರೆ ಈಗ ತಂದು ಕೊಡಬಾರ್ದೂಂತ ಏನಿದೆ ? ಮನೇಲೂ ಯಾರೂ ಇಲ್ಲಾ ನಿಂಗೂ ಬೇಜಾರಾಗಬಾರ್ದೂಂತ ತಂದ್ನಪ್ಪಾ ಅಷ್ಟಕ್ಕೂ ನನ್ನ ಹೆಂಡ್ತೀಗೇ ನಾನು ತಂದಿದ್ದಲ್ವೇನೇ!"

ಗಂಡನ ಈ ತುಂಬು ಪ್ರೀತಿ ಕಂಡು ಸುಬ್ಬಜ್ಜಿ ಸ್ವಲ್ಪ ಮೆತ್ತಗಾದವರು ಪಕ್ಕಕ್ಕೆ ಬಂದು ಕುಳಿತು "ಹೌದೂ ಈ ಹಣ್ಣು, ಹೂವು ತರೋಕೆ ನಿಮ್ಮ ಹತ್ರ ದುಡ್ಡೆಲ್ಲಿತ್ತೂ?" ಮೆಲ್ಲಗೆ ಕೇಳಿದರು.

"ಇದೇ ನೋಡು ನಿಂದು ಸಿ.ಐ.ಡಿ. ಬುದ್ಧಿ! ನಾನೇನು ಹಣ ಕದ್ದಿಲ್ಲ ಮಾರಾಯ್ತೀ ಮೊನ್ನೆ ದಿನ ಶೇಷೂ 'ಅಪ್ಪಾ ಹಜಾಮತಿ ಮಾಡಿಸ್ಕೊಳೀ' ಅಂತ ಹೇಳಿ ನೂರು ರುಪಾಯಿ ಕೊಟ್ಟಿದ್ದ. ಇವತ್ತು ನಾವೇ ಇಬ್ಬರಿದ್ವಲ್ಲಾ ಏನೋ ಉಮೇದು ಬಂತು. ನಿಂಗೆ ಹಣ್ಣು, ಹೂವು ತಂದ್ಕೊಡೋಣ ಅನ್ನಿಸ್ತೂ. ಬೆಳಿಗ್ಗೆ ತಿಂಡಿ ಆದಮೇಲೆ ನಿಧಾನಕ್ಕೆ ಹೋಗಿ ತಗೊಂಬಂದೇ."

ಸುಬ್ಬಜ್ಜಿಯ ಹೃದಯ ತುಂಬಿ ಬಂದಿತ್ತು. ಗಂಡನ ತಲೆಯ ಮೇಲೆ ಕೈಯಾಡಿಸುತ್ತಾ "ಹೌದು, ನಿಮ್ಮ ಕೂದಲೆಲ್ಲ ಉದ್ದ ಬಂದಿದೆ ಇಲ್ನೋಡೀ ಎಂದರು.

"ಬರಲಿ ಬಿಡೇ ಮುಂದಿನ ತಿಂಗಳು ಹಜಾಮತಿ ಮಾಡಿಸ್ಕೋತೀನೀ ಒಂದು ತಿಂಗಳು ಲೇಟಾದ್ರೆ ಏನಾಗುತ್ತೇ? ಕೈ ಹಿಡಿದ ಗಂಡ ಅಪರೂಪಕ್ಕೆ ಹೂ, ಹಣ್ಣು ತಂದು ಕೊಟ್ಟಿದಾನೆ ಅಂತ ಒಂಚೂರೂ ಪ್ರೀತಿ ತೋರ್ಸಲ್ವಲ್ಲೇ ಬರೀ ಆಕ್ಷೇಪಣೆ !"


" ಇಷ್ಟೊಂದು ಪ್ರೀತಿ ನೀವೇ ತೋರಿಸ್ತೀರಲ್ಲ ರೀ ಕಷ್ಟವೋ ಸುಖವೋ ಇಲ್ಲೀವರೆಗಂತೂ ಎಲ್ಲಾ ಚೆಂದವಾಗಿ ನಡೆದಿದೆ. ಮುಂದಿನದ್ದು ಹೇಗೋ ಏನೋ! ನೆನೆಸ್ಕೊಂಡ್ರೆ ಭಯವಾಗುತ್ತೆ. " ಕಾಣದ ಮರಣವನ್ನು ನೆನೆದು ಸುಬ್ಬಜ್ಜಿ ಜೋಲು ಮೋರೆ ಹಾಕಿ ನಿಟ್ಟುಸಿರುಬಿಟ್ಟರೆ,

" ಈಗ ಸಿಕ್ಕಿರೋ ಸುಖ – ಸಂತೋಷ ಅನುಭವಿಸು. ಆಯ್ತಾ? ಮುಂದೇನಾಗುತ್ತೇ ? ಇಬ್ರಲ್ಲಿ ಒಬ್ರು ಮೊದಲು ಹೋಗ್ತೀವೀ ಅಷ್ಟೇ ತಾನೇ ! ಹಾಗೆ ಒಂದ್ವೇಳೆ ನಾವಿಬ್ಬರೂ ಬೇರೆ ಬೇರೆ ಆದ್ರೂ ಏನಂತೆ ! ನಮ್ಮವೂಂತ ಹುಟ್ಟಿದ ನಾಲ್ಕು ಮಕ್ಕಳಲ್ಲಿ ಇಬ್ಬರು ಮಕ್ಕಳು ಇಲ್ಲಿ ಇದ್ದರೆ ನಮಗಿಂತ ಮೊದಲೇ ಎರಡು ಮಕ್ಕಳು ಚಿಕ್ಕವಿದ್ದಾಗಲೇ ಸ್ವರ್ಗಕ್ಕೆ ಹೋಗಿ ಆಗಿದ್ಯಲ್ಲಾ. ನಮ್ಮಿಬ್ಬರಲ್ಲಿ ಅಲ್ಲಿಗೆ ಯಾರು ಮೊದಲು ಹೋಗ್ತೀವೋ ಗೊತ್ತಿಲ್ಲ ಕಣೇ. ಇಲ್ಲಿ ಇದ್ದೋರು ಇಲ್ಲಿರುವ ಮಕ್ಕಳ ಜೊತೆಗೆ ಇರೋದೂ ಅಲ್ಲಿಗೆ ಹೋದೋರು ಅಲ್ಲಿರುವ ಮಕ್ಕಳ ಜೊತೆಗೆ ಇದ್ದುಕೊಂಡು ಯಾವಾಗ ಪರಲೋಕದಲ್ಲಿ ನಾವಿಬ್ರೂ ಒಟ್ಟಿಗೇ ಸೇರ್ತೀವೋಂತ ಇನ್ನೊಬ್ಬರ ದಾರಿ ಕಾಯೋಣಂತೇ..

ಸುಬ್ಬಜ್ಜಿ ಗಂಡನ ಮಾತಿಗೆ "ಹ್ಮ ಅಷ್ಟೇ ಮತ್ತೆ. ಇನ್ನೇನು ತಾನೇ ಮಾಡೋಕಾಗುತ್ತೆ?" ಎಂದರು.

"ಅಯ್ಯೋ ! ಅದಕ್ಯಾಕೆ ನೀನೀಗ ಅಷ್ಟು ಬೇಜಾರು ಮಾಡ್ಕೋತೀಯಾ ಎದ್ದೇಳು ಈಗ ಆಗಲೇ ಗಂಟೆ ಆರಾಗ್ತಾ ಬಂತು ಒಂತೊಟ್ಟು ಕಾಫೀ ಮಾಡ್ಕೊಡು. ಆಮೇಲೆ ಟೀ.ವೀ.ಲಿ ನಿನ್ನ ಧಾರಾವಾಹಿ ಶುರುವಾಗ್ತವೆ." ಎನ್ನಲು

"ಅಯ್ಯೋ ಲೇಟಾಯ್ತಲ್ವೇ. ಪಾಪ ! ದಿನಾ ಐದೂವರೆ ಒಳಗೇ ಸೊಸೆ ಮಾಡ್ಕೊಡೋ ಕಾಫೀ ಕುಡ್ದು ರೂಢಿ ನಿಮಗೆ. ಬೇಗ ಕಾಫಿ ಬೆರೆಸ್ಕೊಂಡು ತರ್ತೀನಿ ಇರೀ ಎಂದು ಅಡಿಗೆ ಮನೆಯತ್ತ




ನಡೆದರು ಸುಬ್ಬಮ್ಮಜ್ಜಿ.

"ನಿಧಾನಕ್ಕೆ ಹೋಗೂ ಎಡವಿ ಬಿದ್ದೀಯಾ" ಕಿಟ್ಟಪ್ಪಜ್ಜನ ಧ್ವನಿ ಸುಬ್ಬಜ್ಜಿಯನ್ನು ಹಿಂಬಾಲಿಸಿತು.

# ಬಂಗಾರಗುಂಡ ಆಂಜನೇಯ ರಥೋತ್ಸವ ಸಂಪನ್ನ

ಉದಯರಶ್ಮಿ ನ್ಯೂಸ್



ಮುದ್ದೇಬಿಹಾಳ: ತಾಲೂಕಿನ ಬಂಗಾರಗುಂಡ ಗ್ರಾಮದ ಆಂಜನೇಯ ಮಹಾರಥೋತ್ಸವವು ರಾಮನವಮಿಯಂದು ಸಹಸ್ರಾರು ಭಕ್ತರ ಸಮ್ಮುಖದಲ್ಲಿ ನೆರವೇರಿತು. ದೇವಸ್ಥಾನದ ಆಡಳಿತ ವರ್ಗದವರು, ಗ್ರಾಮಸ್ಥರು ಸೇರಿದ ಭಕ್ತ ಸಮೂಹ ರಥವನ್ನು ಎಳೆದು, ಉತ್ತತ್ತಿ, ಬಾಳೇಹಣ್ಣು ಸಮರ್ಪಿಸಿ ಕೃತಾರ್ಥರಾದರು.

## ಪಕ್ಷೇತರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ ಶಿರಹಟ್ಟಿ ಭಾವೈಕ್ಯತಾ ಮಹಾಸಂಸ್ಥಾನ ಪೀಠದ ಸ್ವಾಮೀಜಿ

# ಕೇಂದ್ರ ಸಚಿವ ಪ್ರಹ್ಲಾದ್ ಜೋಶಿಗೆ ಸೆಡ್ಡು ಹೊಡೆದ ದಿಂಗಾಲೇಶ್ವರ ಶ್ರೀ

ಉದಯರಶ್ಮಿ ನ್ಯೂಸ್

ಧಾರವಾಡ: ಧಾರವಾಡ ಬಿಜೆಪಿ ಸಂಸದ ಹಾಗೂ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅವರಿಗೆ ಸೆಡ್ಡು ಹೊಡೆದಿರುವ ಶಿರಹಟ್ಟಿ ಭಾವೈಕ್ಯತಾ ಮಹಾಸಂಸ್ಥಾನ ಪೀಠದ ದಿಂಗಾಲೇಶ್ವರ ಸ್ವಾಮೀಜಿ ಕೊನೆಗೂ ಪಕ್ಷೇತರ ಅಭ್ಯರ್ಥಿಯಾಗಿ ಗುರುವಾರ ನಾಮಪತ್ರ ಸಲ್ಲಿಸಿದ್ದಾರೆ.

ಇದರೊಂದಿಗೆ ಹುಬ್ಬಳ್ಳಿ – ಧಾರವಾಡ ಲೋಕಸಭಾ ಕ್ಷೇತ್ರ ತ್ರಿಕೋನ ಸ್ಪರ್ಧೆಯಾಗಿ ಮಾರ್ಪಟ್ಟಿದೆ.

ಈ ಬಾರಿ ಧಾರವಾಡ ಲೋಕಸಭಾ ಕ್ಷೇತ್ರ ಸಹ ಹೈವೋಲ್ಟೇಜ್ ಕ್ಷೇತ್ರವಾಗಿ ಮಾರ್ಪಡುತ್ತಿದ್ದು, ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಬಿಜೆಪಿಯಿಂದ ಸ್ಪರ್ಧೆ ಮಾಡಿದರೆ, ಕಾಂಗ್ರೆಸ್‌ನಿಂದ ವಿನೋದ ಅಸೂಟಿ ಅಖಾಡಕ್ಕಿಳಿದಿದ್ದಾರೆ. ಇನ್ನು, ತಮಗೆ ಎಲ್ಲಾ ಜಾತಿ, ಧರ್ಮದವರು, ರೈತ ಸಂಘಟನೆಗಳ ಬೆಂಬಲ ಇದೆ ಎನ್ನುತ್ತಿರುವ ದಿಂಗಾಲೇಶ್ವರ ಶ್ರೀ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದಾರೆ.




ದಿಂಗಾಲೇಶ್ವರ ಶ್ರೀಗಳು ನಾಮಪತ್ರ ಸಲ್ಲಿಕೆಗೂ ಮುನ್ನ ನಗರದ ಟೌನ್ ಹಾಲ್‌ನಿಂದ ಮೆರವಣಿಗೆ ನಡೆಸಬೇಕಿತ್ತು. ಆದರೆ, ಮರೆವಣಿಗೆ ಮಾಡದೆ ಮೊದಲು ಸಾಂಕೇತಿಕವಾಗಿ ಒಂದು ಸೆಟ್ ನಾಮಪತ್ರವನ್ನು ಸಲ್ಲಿಸಿದರು. ಬಳಿಕ ಮೆರವಣಿಗೆ ಮೂಲಕ ಮತ್ತೊಮ್ಮೆ ಚುನಾವಣಾಧಿಕಾರಿಗಳ ಕಚೇರಿಗೆ ತೆರಳಿ ನಾಮಪತ್ರ ಸಲ್ಲಿಸಲಿದ್ದಾರೆ.

ಈ ವೇಳೆ, ಮಾತನಾಡಿದ ಅವರು, ಪಕ್ಷೇತರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಕೆ ಮಾಡಿದ್ದೇನೆ. ಮೆರವಣಿಗೆ ಮಾಡಿ ಭಕ್ತರನ್ನು ಉದ್ದೇಶಿಸಿ ಮಾತನಾಡಿ, ಬಳಿಕ ಮಾಧ್ಯಮಗಳಿಗೆ ಹೆಚ್ಚಿನ ಮಾಹಿತಿ ನೀಡುತ್ತೇನೆ ಎಂದಷ್ಟೇ ಹೇಳಿ ತೆರಳಿದರು.

ಹಾಲಿ ಸಂಸದ ಪ್ರಹ್ಲಾದ್ ಜೋಶಿ ವಿರುದ್ಧ ನೇರವಾಗಿಯೇ ವಾಗ್ದಾಳಿ ನಡೆಸುತ್ತಿರುವ ಸ್ವಾಮೀಜಿ, "ಎಲ್ಲ ವರ್ಗದ ಜನ ಈಗಿನ ಸಂಸದರಿಂದ ಸಂಕಷ್ಟ ಅನುಭವಿಸಿದ್ದಾರೆ. ಅವರು ನನ್ನ ಬಳಿ ಬಂದು ತಮ್ಮ ಸಮಸ್ಯೆ ಹೇಳಿಕೊಂಡಿದ್ದಾರೆ. ನಾಡಿನ ಜಿಲ್ಲೆಯ ಜನರ ಹಿತದೃಷ್ಟಿಯಿಂದ ನಾನು ಲೋಕಸಭೆ ಚುನಾವಣೆಗೆ ಸ್ಪರ್ಧಿಸುತ್ತಿದ್ದೇನೆ' ಎಂದು ಈ ಹಿಂದೆ ಹೇಳಿದ್ದರು.

# ಮತ ಚಲಾವಣೆ ಮೂಲಕ ನಿಮ್ಮ ಹಕ್ಕು ಚಲಾಯಿಸಿ :ಶರ್ಮಾ

ಉದಯರಶ್ಮಿ ನ್ಯೂಸ್

ಸಿಂದಗಿ: ಯಾವುದೇ ಆಸೆ ಆಕಾಂಕ್ಷೆಗಳಿಗೆ ಒಳಗಾಗದೇ ಒಳ್ಳೆಯ ಅಭ್ಯರ್ಥಿಗೆ ಮತ ಚಲಾವಣೆ ಮಾಡುವ ಮೂಲಕ ನಿಮ್ಮ ಹಕ್ಕನ್ನು ಚಲಾಯಿಸಿ ಎಂದು ತಾಪಂ ಇಒ ಸುಬ್ರಮಣ್ಯ ಶರ್ಮಾ ಹೇಳಿದರು.




ತಾಲೂಕಿನ ಹಿಕ್ಕಣಗುತ್ತಿ ಗ್ರಾಪಂ ವ್ಯಾಪ್ತಿಯ ಬಬಲೇಶ್ವರ ಗ್ರಾಮದ ಕೆರೆಯಲ್ಲಿ ಹೂಳೆತ್ತುವ ಕಾಮಗಾರಿ ಸ್ಥಳದಲ್ಲಿ ತಾಪಂ ಮತ್ತು ಸ್ವೀಪ್ ಸಮಿತಿ ವತಿಯಿಂದ ಹಮ್ಮಿಕೊಂಡ ಮತದಾನ ಜಾಗೃತಿ ಅಭಿಯಾನ ಮತ್ತು ಪ್ರತಿಜ್ಞಾ ವಿಧಿ ಕಾರ್ಯಕ್ರಮದಲ್ಲಿ ಪ್ರತಿಜ್ಞಾ ವಿಧಿ ಬೋಧಿಸಿ ಮಾತನಾಡಿದ ಅವರು, ನರೇಗಾ ಕೂಲಿ ಕಾರ್ಮಿಕರಿಗೆ ಬೇಸಿಗೆ ಇರುವದರಿಂದ ಕೆಲಸದಲ್ಲಿ ರಿಯಾಯಿತಿ ಇದ್ದು ಆದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಕೆಲಸಕ್ಕೆ ಬರುವಂತೆ ತಿಳಸಿದರು. ಹಾಗೂ ಬೇಸಿಗೆಯಲ್ಲಿ ನಿರಂತರ ಕೆಲಸ ನೀಡುತ್ತದೆ ಇದರ ಸದುಪಯೋಗ ಪಡೆಯಬೇಕು ಎಂದರು.

ಇದೇ ಸಂದರ್ಭದಲ್ಲಿ ಸಹಾಯಕ ನಿರ್ದೇಶಕ ನಿತ್ಯಾನಂದ ಯಲಗೋಡ, ಶಿವಶರಣ ವಂದಗನೂರ್, ಶಂಕರ ಪೂಜಾರಿ, ಭೀಮರಾಯ ಚೌಧರಿ, ಬಸವರಾಜ್, ಆನಂದ, ಆರಿಫ್ ಸೇರಿದಂತೆ ಪಂಚಾಯತ್ ಸಿಬ್ಬಂದಿಗಳು, ನರೇಗಾ ಕಾಯಕ ಬಂಧುಗಳು ಮತ್ತು ಕೂಲಿ ಕಾರ್ಮಿಕರು ಇದ್ದರು.

# 'ಉದ್ಯೋಗಂ ಸರ್ವ ಲಕ್ಷಣಂ'

ಉದಯರಶ್ಮಿ ದಿನಪತ್ರಿಕೆ



– ಸಂತೋಷ್ ರಾವ್ ಪೆರ್ಮುಡ, ಪೆರ್ಮುಡ ಮನೆ, ಪಟ್ರಮೆ ಗ್ರಾಮ ಮತ್ತು ಅಂಚೆ ಬೆಳ್ತಂಗಡಿ ತಾಲೂಕು,



ಗಡಿಯಾರವನ್ನು ನೋಡದೇ ದುಡಿಯುವವನು ವ್ಯವಸ್ಥೆಯ ಒಳಗಡೆ ಮಾಲೀಕನಾಗಿ ಬೆಳೆಯುತ್ತಾನೆ.

'ಉದ್ಯೋಗಂ ಪುರುಷ ಲಕ್ಷಣಂ' ಎನ್ನುವ ಕಾಲವೊಂದಿತ್ತು, ಆದರೆ ಇದು ಇಂದು ಬದಲಾಗಿದ್ದು, 'ಉದ್ಯೋಗಂ ಸರ್ವ ಲಕ್ಷಣಂ' ಎಂದು ಬದಲಾಗಿದೆ ಎಂದರೆ ತಪ್ಪಾಗದು. ಏಕೆಂದರೆ ಇಂದು ಉದ್ಯೋಗವು ಕೇವಲ ಪುರುಷರಿಗಷ್ಟೇ ಅಲ್ಲದೇ ಮಹಿಳೆಯರಿಗೂ ಅತ್ಯಂತ ಅನಿವಾರ್ಯವಾಗಿದೆ. ಉದ್ಯೋಗವೇನೋ ಎಲ್ಲರಿಗೂ ಬೇಕು ಆದರೆ ಉದ್ಯೋಗದ ಆಳವನ್ನು ಮತ್ತು ಉದ್ಯೋಗದಾತನ ಆಶಯಗಳನ್ನು ಅರಿತು ಕೆಲಸ ಮಾಡುವ ಕೆಲಸಗಾರರು ಎಷ್ಟು ಮಂದಿ ಇದ್ದಾರೆ ಎಂದು ವ್ಯವಸ್ಥೆಯ ಒಳಗೆ ಅಧ್ಯಯನ ಏನಾದರೂ ಮಾಡಿದರೆ ಸಿಗುವ ಉತ್ತರವು ನಿರಾಶಾದಾಯಕ ಆಗಿರಬಹುದು.

ಏಕೆಂದರೆ ಎಲ್ಲರಿಗೂ ಉದ್ಯೋಗ ಅತ್ಯಂತ ಅಗತ್ಯವಾಗಿ ಬೇಕು, ಉದ್ಯೋಗದಾತನು ನೀಡುವ ಸಂಬಳವಂತೂ ಬೇಕೇ ಬೇಕು, ಆದರೆ ಉದ್ಯೋಗದಾತನು ನೀಡುವ ಸಂಬಳಕ್ಕೆ ನೀಡುವ ಕೆಲಸದ ರೂಪದ ಪ್ರತಿಫಲದ ಕುರಿತು ಯೋಚಿಸುವವರು ತೀರಾ ವಿರಳ. ಸಾಮಾನ್ಯವಾಗಿ ಕೆಲಸಗಾರರಲ್ಲಿ ಪ್ರತಿದಿನವೂ ಬೆಳಗಾಗಿ ಮಧ್ಯಾಹ್ನವಾದರೆ ಸಾಕು, ಸಂಜೆಯಾದರೆ ಸಾಕಪ್ಪಾ ಎನ್ನುವ ಮನೋಭಾವ ಇರುತ್ತದೆ. ಬೆಳಗಿನಿಂದ ಸಂಜೆಯ ನಡುವಿನ ಕೆಲಸದ ಅವಧಿಯಲ್ಲಿ ಕೆಲಸಗಾರನಾಗಿ ನಾನು ಮಾಡಿದ ಕೆಲಸಗಳೇನು? ಉದ್ಯೋಗದಾತನ ಆಶಯಗಳನ್ನು ಕೆಲಸಗಾರನಾಗಿ ನಾನು ತಕ್ಕಮಟ್ಟಿಗಾದರೂ ಈ ದಿನ ಪೂರೈಸಿದ್ದೇನೆಯೇ? ನನಗೆ ನೀಡುವ ಸಂಬಳಕ್ಕೆ ಪ್ರತಿಯಾಗಿ ನಾನು ನನಗೆ ನೀಡಿದ ಜವಾಬ್ದಾರಿಗಳನ್ನು ಸಮರ್ಪಕವಾಗಿ ನಿಭಾಯಿಸುವ ಮೂಲಕ ನನ್ನ ಉದ್ಯೋಗದಾತನಿಗೆ ನಾನು ಸಹಾಯ ಮಾಡಿದ್ದೇನೆಯೇ ಎಂದು ಯಾವ ಕೆಲಸಗಾರನೂ ಯೋಚನೆಯನ್ನು ಮಾಡುವುದಿಲ್ಲ. ಆದರೆ ಸಮಯಕ್ಕೆ ಸರಿಯಾಗಿ ಸಂಬಳ ಬರಲೇ ಬೇಕು, ಲಭಿಸಬೇಕಾದ ಸೌಲಭ್ಯಗಳು ಮತ್ತು ಭತ್ತೆಗಳು ದೊರೆಯಲೇ ಬೇಕು ಎಂಬ ಅಪೇಕ್ಷೆಯಷ್ಟೇ ಇರುತ್ತದೆ.



ಹೆಚ್ಚಿನ ಕೆಲಸಗಾರರಲ್ಲಿ 'ಹಾಕಿದ ಊಟ, ಮಾಡಿದ ಕೆಲಸ' ಎನ್ನುವ ಗಾದೆಯ ಮನಃಸ್ಥಿತಿಯೇ ಇರುತ್ತದೆ. ಅಂದರೆ ಉದ್ಯೋಗದಾತ ನನಗೆಷ್ಟು ಸಂಬಳವನ್ನು ಕೊಡುತ್ತಾನೋ ಅದಕ್ಕೆ ಸರಿಯಾದ ಮೌಲ್ಯವಿರುವ ಕೆಲಸವನ್ನು ಮಾತ್ರ ನಾನು ಮಾಡಬೇಕು (ಉದಾ: ಸಂಸ್ಥೆಯು ದಿನಕ್ಕೆ ರೂ.250/– ಸಂಬಳ ನೀಡಿದರೆ, ಅಷ್ಟೇ ಮೌಲ್ಯವಿರುವ ಕೆಲಸವನ್ನು ನಾನು ಮಾಡಬೇಕು, ಹೆಚ್ಚುವರಿ ಕೆಲಸ ಮಾಡಬಾರದು) ಎನ್ನುವ ಧೋರಣೆ ಇರುತ್ತದೆ. ಅದರ ಜೊತೆಗೆ 'ಪ್ರತಿ ಕ್ಷಣವೂ ಗಡಿಯಾರವನ್ನು ನೋಡಿಕೊಂಡು ಸಮಯಕ್ಕಷ್ಟೇ ಮಹತ್ವವನ್ನು ಕೊಡುತ್ತಾ ದಿನದ ಕೆಲಸದ ಅವಧಿಯನ್ನು ವ್ಯರ್ಥವಾಗಿ ಕಳೆಯುತ್ತಾ ಇರುತ್ತಾರೆ ಮತ್ತು ಸಮಯಕ್ಕೆ ಸರಿಯಾಗಿ ಸಂಬಳವನ್ನು ಅಪೇಕ್ಷಿಸುತ್ತಾರೆ. ಈ ಗುಣವು ಒಳ್ಳೆಯದಲ್ಲ ಮತ್ತು ಇಂತಹ ವ್ಯಕ್ತಿಗಳು ಸಂಸ್ಥೆಯ ಒಳಗಡೆ ಕೇವಲ ಕಾರ್ಮಿಕರಾಗಿಯೇ ಉಳಿದು ಬಿಡುತ್ತಾರೆ. ಯಾರು ಸಮಯ ಮತ್ತು ತನಗೆ ಲಭಿಸುವ ಸಂಬಳದ ಮಿತಿಯನ್ನು ನೋಡದೇ ಇದು ನನ್ನ ಜವಾಬ್ದಾರಿ, ನನಗೆ ನೀಡಿದ ಜವಾಬ್ದಾರಿಯನ್ನು ನಾನು ಅಚ್ಚುಕಟ್ಟಾಗಿ ನಿಭಾಯಿಸಬೇಕು ಎನ್ನುವ ಯೋಚನೆಯೊಂದಿಗೆ ಕೆಲಸ ಮಾಡುತ್ತಾರೋ ಅವರು ವ್ಯವಸ್ಥೆಯ ಒಳಗಡೆ ಮಾಲೀಕರಾಗಿ ಬೆಳೆಯುತ್ತಾರೆ.'



# ಅಮನ್ ಕುಲಕರ್ಣಿ ಆಯ್ಕೆ ನೇಮಕ

ಉದಯರಶ್ಮಿ ನ್ಯೂಸ್



ಚಡಚಣ: ಪಟ್ಟಣದ ಬಿಜೆಪಿ ಯುವ ಮುಖಂಡ ಅಮನ್ ಅಶ್ವಥ್ ಕುಲಕರ್ಣಿ ಅವರನ್ನು ವಿಜಯಪುರ ಜಿಲ್ಲಾ ಸಾಮಾಜಿಕ ಜಾಲತಾಣ ಸಮಿತಿಯ ಸದಸ್ಯ ಸ್ಥಾನಕ್ಕೆ ಆಯ್ಕೆ ಮಾಡಿ, ನೇಮಕ ಮಾಡಲಾಗಿದೆ ಎಂದು ಬಿಜೆಪಿ ಜಿಲ್ಲಾ ಸಾಮಾಜಿಕ ಜಾಲತಾಣ ಸಮಿತಿ ಅಧ್ಯಕ್ಷ ಸಮೀರ ನರಸಿಂಹ ಕುಲಕರ್ಣಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉದಯರಶ್ಮಿ ದಿನಪತ್ರಿಕೆ

## ಕಾವ್ಯರಶ್ಮಿ

– ಡಾ.ಸುಮತಿ ಪಿ.


("ನಮ್ಮ ಕಥಾ ಅರಮನೆ" ಬರಹಗಾರರು)



### ನಿನ್ನಿಂದಲೇ

ಭವದ ಜೀವನದಲಿ ಭರವಸೆ ಕಳೆದಾಗ
ಕುಹಕ ಕೆಸರಾಟಕೆ ಮನ ಕೊರಗಿದಾಗ
ಮೈಮನ ಮುದುಡಿ ದಾರಿ ಕಾಣದಾಗ
ಹೊಸ ಕನಸು ತುಂಬಿದೆಯಲ್ಲ ನೀನಾಗ!

ನಿನ್ನಿಂದಲೇ ನವ ಉಲ್ಲಾಸವು ಉಕ್ಕಿತು
ಬದುಕಿನಲಿ ಚೈತನ್ಯವು ತುಂಬಿಬಂತು
ನೀನಲ್ಲವೇ ಪ್ರೀತಿಯ ವೀಣೆಯ ತಂತು
ಋಣ ತೀರಿಸುವೆ ಜೀವನದಿ ಗೆದ್ದು ನಿಂತು.



# ಕಣ್ಮನ ಸೆಳೆವ ಅದ್ಭುತ ಸೌಂದರ್ಯದ ದುಬೈನ ಮಿರಾಕಲ್ ಗಾರ್ಡನ್

ಉದಯರಶ್ಮಿ ದಿನಪತ್ರಿಕೆ

ವೀಣಾಂತರಂಗ



–ವೀಣಾ ಎಚ್. ಪಾಟೀಲ್, ಮುಂಡರಗಿ

ಅದು ನಮ್ಮ ಕಡೆ ಕಾಣ ಸಿಗುವ ಮಧ್ಯಾಹ್ನ ಮಲ್ಲಿಗೆ ಇಲ್ಲವೇ ತ್ರಿಕಾಲ ಮಲ್ಲಿಗೆ ಎಂದು ಕರೆಯಲ್ಪಡುವ ಒಂದು ಜಾತಿಯ ಪೊದೆಯಂತಹ ಹೂವಿನ ಗಿಡ. ಆ ಹೂವಿನಲ್ಲಿ ಹಲವಾರು ಬಣ್ಣಗಳನ್ನು ಹೊಂದಿರುವ ವರ್ಷದ 12 ತಿಂಗಳು ಹೂ ಬಿಡುವ ಈ ಗಿಡ ಅಲ್ಲಲ್ಲ ಪೊದೆಗೆ ಎಲ್ಲೆಂದರಲ್ಲಿ ಹಬ್ಬಿ ಹರಡುವ ಸಾಮರ್ಥ್ಯವಿದೆ. ಬಹುಶಹ ಅತ್ಯಂತ ಕಡಿಮೆ ನಿರ್ವಹಣೆಯನ್ನು ಬಯಸುವ ಈ ಒಂದು ಪೊದೆಯಿಂದಲೇ ಒಂದು ಸುಂದರವಾದ ಅದ್ಭುತ ಮಿರಾಕಲ್ ಗಾರ್ಡನ್ ನ ಸೃಷ್ಟಿ ಮರುಭೂಮಿ ನಾಡು ದುಬೈನಲ್ಲಿ ಆಗಿದೆ. ಈ ಹೂಗಳನ್ನು ಬಿಟ್ಟರೆ ಇಲ್ಲಿ ಇರುವ ಬೇರೆ ಹೂಗಳೆಂದರೆ ಗುಲಾಬಿ,ಟುಲಿಪ್, ಮೆರಿಗೋಲ್ಡ್ ಮುಂತಾದವು. ಸುಮಾರು 72,000 ಚದರ ಮೀಟರ್ ವಿಸ್ತೀರ್ಣದ ಮಿರಾಕಲ್ ಗಾರ್ಡನ್ ನಲ್ಲಿ 25 ಮಿಲಿಯನ್ ಗಿಡಗಳಿದ್ದು 50 ಮಿಲಿಯನ್ನಿಂತಲೂ ಹೆಚ್ಚು ಹೂಗಳನ್ನು ಹೊಂದಿರುವ ವಿಶ್ವದ ಅತಿ ದೊಡ್ಡ ಹೂಗಳ ತೋಟ ಈ ಮಿರಾಕಲ್ ಗಾರ್ಡನ್. 2013 ಫೆಬ್ರವರಿ 14ರಂದು ವ್ಯಾಲೆಂಟೈನ್ಸ್ ಡೇ ದಿನ ಈ ಮಿರಾಕಲ್ ಗಾರ್ಡನ್ ಉದ್ಘಾಟನೆಯಾಯಿತು. ತಂಪಾದ ವಾತಾವರಣದಲ್ಲಿ ಸುಮಾರು 50 ಮಿಲಿಯಕ್ಕಿಂತಲೂ ಹೆಚ್ಚು ಹೂಗಳು ಅರಳುವ ಭೂಲೋಕದ ಸ್ವರ್ಗ ಎಂದು ಈ ಹೂಗಳ ತೋಟವನ್ನು ಕರೆಯಬಹುದು.

ಬಂಡೆಯನ್ನು ಗುದ್ದಿ ನೀರನ್ನು ತೆಗೆಯಬಹುದು ಎಂಬ ಮಾತನ್ನು ಹಲವಾರು ಬಾರಿ ಕೇಳಿದ್ದೆವು, ಆದರೆ ನೀರೇ ಇಲ್ಲದ ಮರುಭೂಮಿಯಲ್ಲಿ ವರ್ಷದ 12 ತಿಂಗಳು ಹಸಿರಾಗಿರುವಂತಹ ಈ ಮಿರಾಕಲ್ ಗಾರ್ಡನ್ ದುಬೈ ಜನರ ಅಪಾರ ಜೀವನೋತ್ಸಾಹ ಮತ್ತು ಅಸೀಮ ಶ್ರದ್ಧೆಗೆ ಕಾರಣವಾಗಿದೆ ಎಂದರೆ ತಪ್ಪಲ್ಲ.

ಮಿರಾಕಲ್ ಗಾರ್ಡನ್ ನ ಒಳಗೆ ಪ್ರವೇಶಿಸುತ್ತಲೇ ನಮಗೆ ದೊಡ್ಡ ದೊಡ್ಡ ಕಮಾನುಗಳಿಗೆ ಸುತ್ತಿಕೊಂಡಿರುವ ಬಣ್ಣದ ಹೂಗಳ ನೋಟ ಕಾಣ ಸಿಗುತ್ತದೆ. ಸುತ್ತ ಹಚ್ಚ ಹಸುರಿನ ಕೃತಕವಾಗಿ ಬೆಳೆಸಲ್ಪಟ್ಟ ವನಸಿರಿಯನ್ನು ಹೊಂದಿರುವ ಮಿರಾಕಲ್ ಗಾರ್ಡನ್ ಒಳ ಹೋಗುತ್ತಲೆ ಮನಸ್ಸು ಹೂವಿನಷ್ಟೇ ಹಗುರಾಗಿ ದೇಹಕ್ಕೆ ತಂಪಿನ ಅನುಭವವಾಗುತ್ತದೆ. ಕಣ್ಣು ಹಾಯಿಸಿದಷ್ಟು ದೂರ ದೂರಕ್ಕೆ ಹಸಿರು ವನಸಿರಿ ಮತ್ತು ಬಣ್ಣ ಬಣ್ಣದ ಹೂಗಳು ಕಣ್ಮನ ಸೆಳೆದು ಮೈ ಮನದ ದಣಿವನ್ನು ನೀಗಿಸುತ್ತವೆ.

ಕಮಾನುಗಳ ಮೂಲಕ ಒಳ ಪ್ರವೇಶಿಸಿದ ಕೂಡಲೇ ಎದುರಿಗೆ ಮರುಭೂಮಿಯ ವಾಹನ ಒಂಟೆಯ ಆಕೃತಿಯಲ್ಲಿ ಬೆಳೆಸಿರುವ ಎರಡು ಬೃಹತ್ ಗಿಡಗಳನ್ನು ನೋಡಬಹುದು. ಸುಮಾರು ನಾಲ್ಕಾಳೆತ್ತರದ ಈ ಒಂಟೆಗಳ ಆಕೃತಿ ಆಕರ್ಷಣೀಯವಾಗಿದೆ.



ಹಲವಾರು ಕವಲುಗಳಲ್ಲಿ ಉದ್ಯಾನವನ್ನು ಸುತ್ತಿ ಬರಲು ಅವಕಾಶವಿದ್ದು ನಾವು ಬಲ ಪಾರ್ಶ್ವದಿಂದ ಉದ್ಯಾನದ ಒಳಹೊಕ್ಕೆವು. ಕೃತಕವಾಗಿ ನಿರ್ಮಿಸಿದ ಪುಟ್ಟ ಸರೋವರ ಅದಕ್ಕೆ ಅಳವಡಿಸಿರುವ ಏತ ನೀರಾವರಿ ವ್ಯವಸ್ಥೆ ಅಲ್ಲಲ್ಲಿ ಕುಳಿತು ದಣಿವಾರಿಸಿಕೊಳ್ಳಲು ಕುರ್ಚಿಗಳ ವ್ಯವಸ್ಥೆ ಬಿಸಿಲಿನ ಬೇಗೆಯಿಂದ ರಕ್ಷಿಸಿಕೊಳ್ಳಲು ಛತ್ರಿಗಳ ದೊಡ್ಡ ಹಾಸನ್ನೇ ಚಪ್ಪರದಂತೆ ಹಾಸಿದ್ದು ಬಿಸಿಲು ಸೋಂಕದಂತಹ ಅದ್ಭುತ ನೆರಳಿನ ವ್ಯವಸ್ಥೆ ಅಲಿದೆ. ಮುಂದೆ ಸಾಗುತ್ತಾ ಹೋದರೆ ಅಲ್ಲೊಂದು ವಿಮಾನ. ಬಹುಶಹ ಕಸದಿಂದಲೂ ರಸ ತೆಗೆಯುವ ಕಲೆ ದುಬೈ ಜನರಿಗೆ ದಕ್ಕಿದೆ. ಇಡೀ ವಿಮಾನವನ್ನು ಬಣ್ಣ ಬಣ್ಣದ ಹೂಗಳಿಂದ ಹಸಿರು ಎಲೆಗಳಿಂದ ಆವೃತಗೊಳ್ಳುವಂತೆ ಬೆಳೆಸಿರುವ ವಿಮಾನದ ಪ್ರತಿಯೊಂದು ಭಾಗವು ಅತ್ಯಂತ ಆಕರ್ಷಣೀಯವಾಗಿ ಕಾಣುವಂತೆ ಮಾರ್ಪಡಿಸಲಾಗಿದೆ. ಮುಂದೆ ಸಾಗುತ್ತಿದ್ದಂತೆ ದೊಡ್ಡ ದೊಡ್ಡ ಗಾತ್ರದ ಸ್ಮರ್ಫ್ ಕಾರ್ಟೂನ್ಗಳನ್ನು ಅಲ್ಲಲ್ಲಿ ಅಳವಡಿಸಲಾಗಿದ್ದು ಅವುಗಳ ಮುಂದೆ ಆ ಕಾರ್ಟೂನ್ ಗಳು ನಿಂತಿರುವ ಭಂಗಿಯಲ್ಲಿಯೇ ಫೋಟೋ ತೆಗೆದುಕೊಳ್ಳುವ ನೂರಾರು ಜನರ ಗುಂಪು ಅಲ್ಲಿತ್ತು. ನಾವು ಕೂಡ ಅಲ್ಲಲ್ಲಿ ನಿಂತು ಫೋಟೋಗಳನ್ನು ತೆಗೆಸಿಕೊಂಡು ಮುಂದೆ ಸಾಗಿದಾಗ ಅಲ್ಲಿ ಬೃಹದಾಕಾರದ ಗಿಡಗಳನ್ನು ಪೆಂಗ್ವಿನ್ ಮಾದರಿಯಲ್ಲಿ ಕತ್ತರಿಸಿ ಬೆಳೆಸಲಾಗಿತ್ತು. ಮುಂದೆ ಸಾಗಿದಾಗ ಅಲ್ಲಿ ನಮ್ಮ ಸೂರ್ಯಕಾಂತಿಯನ್ನು ಹೋಲುವ ಕೆಲ ಹೂಗಳನ್ನು ಬೆಳಸಲಾಗಿತ್ತು. ಮೊದಲ ಬಾರಿಗೆ ಬೇರೊಂದು ರೀತಿಯ ಪುಷ್ಪವನ್ನು ಕಂಡಾಗ ಕಣ್ಣರಳಿತ್ತು. ಹಾಗೆಯೇ ಕಣ್ಣಿನ ಜಾಗದಲ್ಲಿ ಪುಟ್ಟ ಕಪ್ಪು ಬಿಳಿ ಹೂಗಳ ಬೆಳೆಸುವಿಕೆ ಅದ್ಭುತ. ಅಲ್ಲಿಗೆ ಮುಂದೆ ಸಾಗಿದಾಗ ಅಲ್ಲೊಂದು ಬೃಹದಾಕಾರದ ಮರ ಆ ಮರದಲ್ಲಿ ದೊಡ್ಡ ರಾಕ್ಷಸನಂತಹ ಮುದ್ದಾದ ಆಕೃತಿ ಮತ್ತು ಅದರ ಮಕ್ಕಳ ಆಕೃತಿಗಳು. ಇದನ್ನು ನೋಡಿದಾಗ ನನಗೆ ನಾವು ಚಿಕ್ಕಂದಿನಲ್ಲಿ ಕೇಳುತ್ತಿದ್ದ ಹುಣಸೆ ಮರದಲ್ಲಿ ವಾಸವಾಗಿರುತ್ತಿದ್ದ ಏಳು ಮಕ್ಕಳ ತಾಯಿ ನೆನಪಾದಳು.



ಮತ್ತೆ ಮುಂದೆ ತಿರುವಿನಲ್ಲಿ ಸಾಗಿದಾಗ ಅಲ್ಲಲ್ಲಿ ಇಗ್ಲೂ ಗಳಂತಹ ರಚನೆಗಳು ಮತ್ತು ಅವುಗಳ ಮೇಲೂ ಕೂಡ ಹಬ್ಬಿದ ಹೂಗಳ ಪೊದೆಗಳು ಕಾಣಸಿಕ್ಕವು. ನಂತರ ಅಲ್ಲೊಂದು ಬೃಹದಾಕಾರದ ಮನೆ. ಬೆಂಗಳೂರಿನ ಟಿಪ್ಪು ಪ್ಯಾಲೇಸ್ ನಂತೆ ತೋರುವ ಆ ಬೃಹತ್ ಭವನಕ್ಕೆ ಹೂವಿನ ಬಳ್ಳಿಗಳ ಶೃಂಗಾರ! ಅಬ್ಬಾ ವರ್ಣಿಸಲಸದಳ. ಇಳಿ ಮಧ್ಯಾಹ್ನದ ಆ ಹೊತ್ತಿನಲ್ಲಿ ಆ ಬೃಹತ್ ಭವನದ ಹಿನ್ನೆಲೆಯಲ್ಲಿ ಹೂಗಳ ಸೌಂದರ್ಯ ಕಣ್ಮನ ಸೆಳೆಯುವಂತಿತ್ತು. ಅತ್ಯಾಕರ್ಷಕವಾದ ಹಸಿರು ಮತ್ತು ಹೂಗಳ ವರ್ಣ ಸಂಯೋಜನೆ ಅದ್ಭುತ. ಅಲ್ಲಿಯೇ ಪಕ್ಕದಲ್ಲಿ ಹೂಗಳಿಂದಲೇ ನಿರ್ಮಿಸಿದ ಬೃಹತ್ ಗಡಿಯಾರ ಇದೆ. ಸಾಗಿದಷ್ಟು ದೂರದವರೆಗೂ ಕಣ್ಣಂಚಿನ ಕೊನೆಯ ನೋಟದವರೆಗೂ ಉದ್ಯಾನವನ್ನು ವೀಕ್ಷಿಸುತ್ತಾ ಕಾಲುಗಳು ದಣಿದಿದ್ದರೂ, ಮನಸ್ಸು ಅನಿರ್ವಚನೀಯ ಆನಂದವನ್ನು ಅನುಭವಿಸುತ್ತಿತ್ತು. ಮತ್ತೆ ಹಲವಾರು ಭವನಗಳು ತುಸು ಎತ್ತರದ ಪ್ರದೇಶದ ಮೇಲೆ ಹೂಗಳ ಅಲಂಕಾರದಿಂದ ನಿರ್ಮಿಸಲ್ಪಟ್ಟಿದ್ದು ಅವುಗಳನ್ನು ತಲುಪುವ ದಾರಿಯಲ್ಲಿ ಹಸಿರಿನಿಂದ ಕೂಡಿದ ಮೆಟ್ಟಿಲುಗಳು ಬಣ್ಣ ಬಣ್ಣದ ಹೂಗಳ ಬಳ್ಳಿಗಳನ್ನು ಹಬ್ಬಿಸಿರುವ ಕಮಾನುಗಳು ದೊಡ್ಡ ದೊಡ್ಡ ದೀಪದ ಕಂಬಗಳು ಅವುಗಳಿಗೂ ಕೂಡ ತೂಗು ಬಿಟ್ಟಿರುವ ದೊಡ್ಡ ದೊಡ್ಡ ಹೂವಿನ ಕುಂಡಗಳು ಒಂದೇ ಎರಡೇ!! ಆ ನೋಟ ಮನಸ್ಸಿಗೆ ಮುದ ನೀಡುವುದರಲ್ಲಿ ಆಶ್ಚರ್ಯವೇ ಇಲ್ಲ. ಅಲ್ಲಿಯೇ ಒಂದೆಡೆ ಬೃಹದಾಕಾರದ ಟೆಡ್ಡಿ ಬೇರ್ ಗಳ ಆಕಾರದಲ್ಲಿ ಕತ್ತರಿಸಿದ ಗಿಡಗಳು ಅವುಗಳ ಒಂದೆಡೆ ಬಿದಿರಿನ ಬೃಹದಾಕಾರದ ಕುಂಡಗಳು ಅವುಗಳ ಮೇಲೆ ಮತ್ತೆ ಬಣ್ಣ ಬಣ್ಣದ ಹೂಗಳು. ಸುತ್ತಿದಷ್ಟೂ ಮುಗಿಯದ, ನೋಡಿದಷ್ಟು ತಣಿಯದ ಹೂಗಳ ಸಾಮ್ರಾಜ್ಯ ಇಲ್ಲಿದೆ. ಸುಮಾರು ಎರಡು–ಮೂರು ಗಂಟೆಗಳ ಕಾಲ ಇಡೀ ಉದ್ಯಾನವನ ಸುತ್ತಿ ಅಲ್ಲಲ್ಲಿ ನಿಂತು ಫೋಟೋಗಳನ್ನು ತೆಗೆದುಕೊಂಡು ಕಣ್ಮನ ಸೆಳೆಯುವ ಅದ್ಭುತ ಸೌಂದರ್ಯವನ್ನು ಆಸ್ವಾದಿಸುತ್ತಾ ಅಂತಿಮವಾಗಿ ಮತ್ತೆ ಮುಂಭಾಗಕ್ಕೆ ಬಂದು ನಿಂತಾಗ ಸಣ್ಣದಾಗಿ ಹೊಟ್ಟೆ ಹಸಿದಿತ್ತು. ಅಲ್ಲಿಯೇ ಆನೆ ಆಕಾರದ ಗಿಡಗಳ ಕೆಳಗೆ ಕುಳಿತುಕೊಂಡು ನಮ್ಮದೊಂದು ಗ್ರೂಪ್ ಫೋಟೋ ತೆಗೆದುಕೊಂಡೆವು. ಅಲ್ಲಿಯೇ ಒಬ್ಬ ಐಸ್ ಕ್ರೀಂ ಮಾರುವವ ನಿಂದ ಐಸ್ ಕ್ರೀಮ್ ಕೊಂಡು ಅದನ್ನು ಸವಿಯುತ್ತಾ ಮತ್ತೊಮ್ಮೆ ಮಿರಾಕಲ್ ಗಾರ್ಡನ್ ನ ವಿಹಂಗಮ ದೃಶ್ಯಗಳನ್ನು ಆಸ್ವಾದಿಸಿದೆವು. ಉತ್ಸಾಹದಿಂದ –ನಡೆದು ಇಡೀ ಮಿರಾಕಲ್ ಗಾರ್ಡನ್ ಇಂಚಿಂಚು ಜಾಗವನ್ನು ನೋಡಿ ಕಣ್ತುಂಬಿಕೊಂಡ ನಮ್ಮ ಮನಸ್ಸು ತೃಪ್ತಿ ಮತ್ತು ಸಂತಸದ ಕಡಲಾಗಿತ್ತು. ಅಷ್ಟು ದೊಡ್ಡ ವಿಸ್ತೀರ್ಣದ ಹೂದೋಟದಲ್ಲಿ ಎಲ್ಲಿಯೂ ಉಸ್ತುವಾರಿ ಕೆಲಸದವರು ಕಾಣುತ್ತಿರಲಿಲ್ಲ. ಒಂದು ಚೂರು ಕಸವೂ ನೆಲದ ಮೇಲಿರಲಿಲ್ಲ. ಗಿಡದ ತರಗೆಲೆಗಳಾಗಲಿ ಉದುರಿದ ಹೂವಿನ ಕಸವಾಗಲಿ ಇಲ್ಲದೆ ಸ್ವಚ್ಛ ಸುಂದರವಾದ ತೋಟ ಅದಾಗಿದೆ.



ಮಾನವ ನಿರ್ಮಿತ ಈ ಪುಷ್ಪೋದ್ಯಾನ ದುಬೈನ ಮುಕುಟಮಣಿಯಂತೆ ಶೋಭಿಸುತ್ತದೆ ಎಂದು ಹೇಳಿದರೆ ತಪ್ಪಿಲ್ಲ. ಕರ್ತೃತ್ವ ಶಕ್ತಿಗೆ ಇನ್ನೊಂದು ಹೆಸರು ದುಬೈನ ಮಿರಾಕಲ್ ಗಾರ್ಡನ್. ಜೀವನದಲ್ಲಿ ಸಾಧ್ಯವಾದರೆ ಒಮ್ಮೆ ನೋಡಿ ಉದ್ಯಾನದ ಸೌಂದರ್ಯವನ್ನು ಸವಿಯಿರಿ.

**Printed by:** AVINASH BIDARI, **Published and Onwed by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR